Swabhimani Sahakari

Pages - 24, ₹12

Volume -13

Issue - 04

April - 2016

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ
ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಹೊಸ ಮರದಲಿ ಹೂ ತುಂಬಿದೆ ನೋಡು!
ಆಲಿಸು! ಜೇನಿನ ಹಬ್ಬದ ಹಾಡು!
ಜೀವನವೆಂಬುದು ಹೂವಿನ ಬೀಡು;
ಕವಿಯೆದೆ ಹೆಜ್ಜೇನಿನ ಗೂಡು!
ಕವಿಯೊಲ್ಮೆಯ ಕೋ! ಧನ್ಯ ಯುಗಾದಿ!
ಮರಳಲಿ ಇಂತಹ ನೂರು ಯುಗಾದಿ!

—ಕುವೆಂಪು



14

ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ



15

ಶ್ರೀರಾಮ ನವಮಿ



19

ಮಹಾವೀರ ಜಯಂತಿ

ಯುಗಾದಿ,
ಡಾ.ಬಿ.ಆರ್.ಅಂಬೇಡ್ಕರ್,
ಶ್ರೀರಾಮ ನವಮಿ,
ಮಹಾವೀರ ಜಯಂತಿ
ಹಾರ್ದಿಕ
ಶುಭಾಶಯಗಳು



▸▸ ಸೌಹಾರ್ದ ಸಹಕಾರಿಗಳ ಸಂಖ್ಯೆ : ೩೫೬೦ ▸▸ 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : ೮೯೦



ಸಂಯುಕ್ತ ಸಹಕಾರಿ ಒಂದು ಶಾಸನಬದ್ಧ ರಚಿತವಾದ ಸಂಸ್ಥೆ. ಇದಕ್ಕೆ ನಿಗದಿತ ಸಮಯದೊಳಗೆ ಚುನಾವಣೆಯನ್ನು ಮಾಡಿಸಬೇಕು ಎಂದು ಸಂಯುಕ್ತ ಸಹಕಾರಿಯು ಮಾಡಿದ ಪ್ರಯತ್ನಗಳನ್ನು ಹಾಗೂ ಅಂತಿಮವಾಗಿ ಚುನಾವಣಾ ಪ್ರಾಧಿಕಾರದ ತೀರ್ಮಾನವನ್ನು ರಾಜ್ಯದ ಸೌಹಾರ್ದ ಸಹಕಾರಿಗಳ ಅವಗಾಹನೆಗೆ ತರುವುದು ಸಂಯುಕ್ತ ಸಹಕಾರಿಯ ಕರ್ತವ್ಯವೆಂದು ಭಾವಿಸಿದ್ದೇನೆ.

# ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ಚುನಾವಣೆ

ರಾಜ್ಯದ ಎಲ್ಲಾ ಸಹಕಾರಿಗಳಿಗೆ ನೂತನ ಸಂವತ್ಸರ ದುರ್ಮುಖಿ, ಯುಗಾದಿ, ಶ್ರೀ ರಾಮನವಮಿ, ಅಂಬೇಡ್ಕರ್ ಜಯಂತಿ ಹಾಗೂ ಮಹಾವೀರ ಜಯಂತಿಯ ಶುಭ ಹಾರೈಕೆಗಳು. ನೂತನ ಸಂವತ್ಸರದಲ್ಲಿ ತಮ್ಮೆಲ್ಲರಿಗೂ ಅಭಿವೃದ್ಧಿಯನ್ನು ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ಸಂಯುಕ್ತ ಸಹಕಾರಿಯ ಪ್ರಸಕ್ತ ಆಡಳಿತ ಮಂಡಲಿಯ ಅಧಿಕಾರಾವಧಿ ದಿನಾಂಕ 15 ಮಾರ್ಚ್ 2016ಕ್ಕೆ ಮುಕ್ತಾಯವಾಗುತ್ತಿದ್ದುದರ ಹಿನ್ನೆಲೆಯಲ್ಲಿ ನಿಗದಿತ ಅವಧಿಯೊಳಗೆ ನೂತನ ಆಡಳಿತ ಮಂಡಲಿಯ ಚುನಾವಣೆಯನ್ನು ನಡೆಸಿಕೊಡಲು ಸೆಪ್ಟೆಂಬರ್ 2015ರಲ್ಲಿ ರಾಜ್ಯದ ಚುನಾವಣಾ ಪ್ರಾಧಿಕಾರವನ್ನು ಕೋರಲಾಗಿತ್ತು. ನಂತರ ಅನೇಕ ಬಾರಿ ಜ್ಞಾಪನಾ ಪತ್ರಗಳನ್ನು ಬರೆಯಲಾಯಿತು. ಈ ಬಗ್ಗೆ ಮಾನ್ಯ ಸಹಕಾರಿ ಸಚಿವರಿಗೂ ಸಹ ಮನವಿ ಸಲ್ಲಿಸಿ, ಸಂಯುಕ್ತ ಸಹಕಾರಿಯ ನೂತನ ಆಡಳಿತ ಮಂಡಲಿಯ ಚುನಾವಣೆಯನ್ನು ನಿಗದಿತ ಅವಧಿಯೊಳಗೆ ನಡೆಸಿಕೊಡುವಂತೆ ವ್ಯವಸ್ಥೆ ಮಾಡಲು ಪ್ರಾರ್ಥಿಸಲಾಗಿತ್ತು. ಮಾನ್ಯ ಚುನಾವಣಾ ಪ್ರಾಧಿಕಾರವನ್ನು ಹಲವು ಬಾರಿ ಭೇಟಿ ಮಾಡಿ, ಚುನಾವಣೆಯನ್ನು ನಿಗದಿತ ಅವಧಿಯೊಳಗೆ ನಡೆಸಿಕೊಡಲು ಚುನಾವಣಾಧಿಕಾರಿ/ರಿಟರ್ನಿಂಗ್ ಅಧಿಕಾರಿ ನೇಮಿಸುವಂತೆ ವಿನಂತಿಸಲಾಗಿತ್ತು.

ಮಾನ್ಯ ಚುನಾವಣಾ ಪ್ರಾಧಿಕಾರವು ರಾಜ್ಯದ ಒಟ್ಟಾರೆ ಸಹಕಾರಿ ಸಂಸ್ಥೆಗಳ ಚುನಾವಣೆಗಳನ್ನು ನಡೆಸುವ ಜವಾಬ್ದಾರಿಯ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯನ್ನು ಉಳಿದೆಲ್ಲ ಸಹಕಾರಿ ಸಂಸ್ಥೆಗಳ ಸಾಲಿನಲ್ಲಿ ಪರಿಗಣಿಸಿ 3 ಹಂತದ ಚುನಾವಣಾ ಪ್ರಕ್ರಿಯೆಯನ್ನು ಜಾರಿಗೊಳಿಸುವ ಆದೇಶವನ್ನು ದಿನಾಂಕ 16–1–2016 ರಂದು ಹೊರಡಿಸಿತು. ಈ ಆದೇಶದಂತೆ ಸಂಯುಕ್ತ ಸಹಕಾರಿಯ ಚುನಾವಣೆಯನ್ನು ಜುಲೈ ಅಥವಾ ಸೆಪ್ಟೆಂಬರ್ ತಿಂಗಳಲ್ಲಿ ನಡೆಯಬೇಕಾಗುತ್ತದೆ. ಈ ಆದೇಶವನ್ನು ಸಂಯುಕ್ತ ಸಹಕಾರಿಗೆ ಅನ್ವಯಿಸಬಾರದು. ಸಂಯುಕ್ತ ಸಹಕಾರಿಗೆ ಪ್ರತ್ಯೇಕ ಆದೇಶವನ್ನು ಹೊರಡಿಸಿ, ನಿಗದಿತ ಅವಧಿಯೊಳಗೆ ಚುನಾವಣೆಗೆ ವ್ಯವಸ್ಥೆ ಮಾಡಿಕೊಡಬೇಕು ಎಂದು ವಿನಂತಿಸಿಕೊಂಡಾಗ್ಯೂ ಚುನಾವಣಾ ಪ್ರಾಧಿಕಾರವು ಈ ಬಗ್ಗೆ ಕಾನೂನು ಸಲಹೆಯನ್ನು ಪಡೆದು, ಸಂಯುಕ್ತ ಸಹಕಾರಿಯನ್ನೂ ಉಳಿದ ಸಹಕಾರಿ ಸಂಸ್ಥೆಗಳ ಸಾಲಿನಲ್ಲಿ ಪರಿಗಣಿಸುವ ನಿರ್ಣಯ ಮಾಡಿದೆ. ಸಂಯುಕ್ತ ಸಹಕಾರಿಯ ಚುನಾವಣೆಯನ್ನು ಜುಲೈ ಅಥವಾ ಸೆಪ್ಟೆಂಬರ್‌ನಲ್ಲಿ ಮಾಡುವುದಾಗಿ ತಿಳಿಸಿ, ಚುನಾವಣಾಧಿಕಾರಿಯನ್ನು ನೇಮಕ ಮಾಡಿದೆ.

ಸಂಯುಕ್ತ ಸಹಕಾರಿ ಒಂದು ಶಾಸನಬದ್ಧ ರಚಿತವಾದ ಸಂಸ್ಥೆ. ಇದಕ್ಕೆ ನಿಗದಿತ ಸಮಯದೊಳಗೆ ಚುನಾವಣೆಯನ್ನು ಮಾಡಿಸಬೇಕು ಎಂದು ಸಂಯುಕ್ತ ಸಹಕಾರಿಯು ಮಾಡಿದ ಪ್ರಯತ್ನಗಳನ್ನು ಹಾಗೂ ಅಂತಿಮವಾಗಿ ಚುನಾವಣಾ ಪ್ರಾಧಿಕಾರದ ತೀರ್ಮಾನವನ್ನು ರಾಜ್ಯದ ಸೌಹಾರ್ದ ಸಹಕಾರಿಗಳ ಅವಗಾಹನೆಗೆ ತರುವುದು ಸಂಯುಕ್ತ ಸಹಕಾರಿಯ ಕರ್ತವ್ಯವೆಂದು ಭಾವಿಸಿದ್ದೇನೆ.

ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ಚುನಾವಣೆಯನ್ನು ನಡೆಸಿಕೊಡಲು ನೇಮಕವಾಗಿರುವ ರಿಟರ್ನಿಂಗ್ ಅಧಿಕಾರಿ ಈಗಾಗಲೇ ಸಂಯುಕ್ತ ಸಹಕಾರಿಗೆ ಭೇಟಿ ನೀಡಿದ್ದಾರೆ. ಸಂಯುಕ್ತ ಸಹಕಾರಿಯ ಚಟುವಟಿಕೆಗಳನ್ನು ಅಧ್ಯಯನ ಮಾಡಿ, ಚುನಾವಣೆಯನ್ನು ನಡೆಸಿಕೊಡುವುದಾಗಿ ತಿಳಿಸಿದ್ದಾರೆ. ಚುನಾವಣಾ ಪ್ರಾಧಿಕಾರದ ಆದೇಶದನ್ವಯ ಜುಲೈ ಮಾಹೆಯಲ್ಲಿ ಚುನಾವಣೆ ನಡೆಸುವುದಾಗಿ ತಿಳಿಸಿದ್ದಾರೆ. ಚುನಾವಣಾಧಿಕಾಯವರಿಗೆ ಅಗತ್ಯವಾದ ನೆರವನ್ನು ನೀಡಲು ಸಂಯುಕ್ತ ಸಹಕಾರಿ ಸಿದ್ಧವಿದೆ. ರಾಜ್ಯದ ಸೌಹಾರ್ದ ಸಹಕಾರಿಗಳ ಸಂಪೂರ್ಣ ಸಹಕಾರವೂ ಅಗತ್ಯ.

**ಗುರುನಾಥ ಜಾಂತಿಕರ,** ಅಧ್ಯಕ್ಷರು

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಗುರುನಾಥ ಜಾಂತಿಕರ
ಗೌರವ ಅಧ್ಯಕ್ಷರು

ಶ್ರೀ ಹೆಚ್.ವಿ.ರಾಜೀವ
ಗೌರವ ಉಪಾಧ್ಯಕ್ಷರು

ಶ್ರೀ ಎಸ್.ಆರ್.ಸತೀಶಚಂದ್ರ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ್
ಸಂಪಾದಕರು

ಶ್ರೀ ವಿ.ಜೆ.ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

## ಒಳ ಪುಟಗಳಲ್ಲಿ . . .

ಜ್ಞಾನ ಜ್ಯೋತಿ ........ 4
ಬರಪೀಡಿತ ಪರಿಹಾರ ಕಾರ್ಯಗಳಿಗಾಗಿ ಸಹಾಯ ನೀಡುವ ಕುರಿತು... 5
"ನಂದಿವನ" ಕಲಬುರಗಿ ಬರಪೀಡಿತ ಪ್ರದೇಶದ ಜಾನುವಾರಗಳಿಗೆ ಆಶ್ರಯತಾಣ ನಿಸ್ವಾರ್ಥ ಭಾವದ ಶರಣ ಜೀವಿ ಶ್ರೀ ಬಸವರಾಜ ದಿಗ್ಗಾವಿಯವರ ಪ್ರಶಂಸಾರ್ಹ ಸೇವೆ ........ 6
ಸಹಕಾರಿಗಳು ಜೀವನದ ಎಲ್ಲಾ ಸ್ತರಗಳಲ್ಲಿ ಕಾರ್ಯ ನಿರ್ವಹಿಸುವುದು ಅವಶ್ಯಕ ........ 7
ಸಂಯುಕ್ತ ಸಹಕಾರಿಯ ಸಿಬ್ಬಂದಿಗಳಿಗೆ ಕುಪ್ಪಳ್ಳಿಯಲ್ಲಿ 2 ದಿನಗಳ ಅಧಿಪ್ರೇರಣೆ ತರಬೇತಿ ಸೌಹಾರ್ದ ಸಹಕಾರಿಗಳ ಆಶಯಗಳಿಗೆ ಸ್ಪಂದಿಸುವ ಮನೋಭಾವ ಬೆಳೆಸಿಕೊಳ್ಳಿ – ಶ್ರೀ ಗುರುನಾಥ ಜಾಂತಿಕರ ........ 8
ಮಾರ್ಚ್ 2016ರಲ್ಲಿ ಸಂಯುಕ್ತ ಸಹಕಾರಿಯ ಶಾಸನಬದ್ಧ ಕಾರ್ಯಚಟುವಟಿಕೆಗಳು ........ 10
ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಆಯ್ಕೆ ........ 12
ಜಿಲ್ಲಾ/ ತಾಲ್ಲೂಕು ಪಂಚಾಯಿತಿಗಳಲ್ಲಿ ಸೌಹಾರ್ದ ಸಹಕಾರಿಗಳು ........ 13
ಸಹಕಾರಿಗಳ ಬೆಳವಣಿಗೆಗೆ ಆಧುನಿಕ ವ್ಯವಹಾರ ನಿರ್ವಹಣೆ ಅಗತ್ಯತೆ ........ 15
ಯುಗಾದಿ ಹಬ್ಬದ ಶುಭಾಷಯಗಳು ........ 16
ಆರ್ಥಿಕ ಮಾರುಕಟ್ಟೆ ವ್ಯವಸ್ಥೆಯಲ್ಲಿ ಸಹಕಾರಿ ಸಂಸ್ಥೆಗಳ ಸ್ಥಿರೀಕರಣ ........ 19
RBI NEWS - MARCH 2016........ 23

# ಸಂಪಾದಕೀಯ

## ಪ್ರಗತಿಯ ಸಿಂಹಾವಲೋಕನ, ಆಂತರಿಕ ಕಾರ್ಯಚಟುವಟಿಕೆಗಳ ಮಂಥನ ಪ್ರಗತಿಗೆ ಪೂರಕ ಸಹಕಾರಿಗಳ, ಸಾರ್ವಜನಿಕರ, ಆರ್ಥಿಕ ಪರಿಣಿತರ ಹಾಗೂ ಸರಕಾರದ ಗಮನ ಸೆಳೆದಾಗ ಸಾರ್ಥಕ

ಸಮಾಜದ ಕೊನೆಯ ವ್ಯಕ್ತಿಯ ಅಭಿವೃದ್ಧಿಯ ಗುರಿ ಹೊಂದಿರುವುದು ಸಹಕಾರಿ ಕ್ಷೇತ್ರ. ಶೋಷಣೆರಹಿತ ಸಮಾಜ ನಿರ್ಮಾಣದಲ್ಲಿ ಸಹಕಾರ ಕ್ಷೇತ್ರದ ಪಾತ್ರ ಮಹತ್ವದ್ದು. ಒಂದು ಶತಮಾನಕ್ಕೂ ಹೆಚ್ಚು ಇತಿಹಾಸವಿರುವ ಈ ಕ್ಷೇತ್ರದ ಸಾಧನೆ ಕಡಿಮೆ ಏನಲ್ಲ. ಸಂಖ್ಯಾತ್ಮವಾಗಿ, ಗುಣಾತ್ಮಕವಾಗಿ ಬೆಳೆದಿದೆ. ಇನ್ನೂ ಬೆಳೆಯಲು ಹಾಗೂ ಸೇವೆ ಮಾಡಲು ಶಕ್ತಿ ಇದೆ, ಸಾಮರ್ಥ್ಯ ಇದೆ, ಸಂಪನ್ಮೂಲಗಳಿವೆ, ಅವಕಾಶಗಳಿವೆ. ಆದರೆ, ಅರ್ಥಶಾಸ್ತ್ರಜ್ಞರು ಹಾಗೂ ಸರಕಾರದಲ್ಲಿ ಮುಂಚೂಣಿಯಲ್ಲಿರುವ ಗಣ್ಯರು ಸಹಕಾರ ಕ್ಷೇತ್ರದ ಸಾಧನೆ ಸಾಲದು ಎಂದು ಅಭಿಪ್ರಾಯಪಡುತ್ತಾರೆ. ಇದು ಸಹಜ. ಖಾಸಗಿಯವರಿಗೆ ಸರಕಾರಿ ವ್ಯವಸ್ಥೆಯನ್ನು ಹೋಲಿಸಿದರೆ ಇದು ಕಡಿಮೆ. ಆದರೆ, ಇವರೊಂದಿಗೆ ಹೋಲಿಸುವುದಲ್ಲ. ಸರಕಾರ ಮಾಡಬೇಕಾದ ಅನೇಕ ಕೆಲಸ ಕಾರ್ಯಗಳನ್ನು ಸಮಾನ ಮನಸ್ಕರು ಸಂಘಟಿತರಾಗಿ ಸಾಧಿಸುವ ಪ್ರಕ್ರಿಯೆ ಸಹಕಾರ ಚಳುವಳಿ. ಇದಕ್ಕೆ ತನ್ನದೇ ಆದ ತತ್ವಗಳಿವೆ. ಇತಿಮಿತಿಗಳಿವೆ. ಈ ದೇಶದ ಜನರ ಬಡತನ, ಜನಸಂಖ್ಯೆ, ಅನಕ್ಷರತೆ, ಸಮಾಜದ ಮೇಲ್ವರ್ಗದವರ ಹಿಡಿತ ಇವೆಲ್ಲವುಗಳನ್ನು ಮೆಟ್ಟಿ ನಿಂತು ಸಹಕಾರ ಕ್ಷೇತ್ರ ಕಾರ್ಯನಿರ್ವಹಿಸಬೇಕಿದೆ.

ದಿನಾಂಕ : 5, 6 ಮಾರ್ಚ್ 2016 ರಂದು ಮೈಸೂರಿನಲ್ಲಿ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಭಾರತೀಯ ಸಹಕಾರಿ ಅಧ್ಯಯನ ಸಂಘ (ಇಂಡಿಯನ್ ಸೊಸೈಟಿ ಫಾರ್ ಸ್ಟಡೀಸ್ ಇನ್ ಕೋ–ಆಪರೇಷನ್) ಇದರ 31ನೇ ರಾಷ್ಟ್ರೀಯ ಸಮಾವೇಶ ನಡೆಯಿತು. ಈ ಸಮಾವೇಶದಲ್ಲಿ ಸಂಯುಕ್ತ ಸಹಕಾರಿಯು ಭಾಗವಹಿಸಿ ಸೌಹಾರ್ದ ಸಹಕಾರ ಇದೊಂದು ಅನುಭವಿ ಸಹಕಾರಿ ಚಿಂತಕರ ಸಭೆ. ಸಹಕಾರಿ ಕ್ಷೇತ್ರದ ಪ್ರಚಲಿತ ವಿಷಯಗಳ ಬಗ್ಗೆ ಚರ್ಚೆ, ವಿವಿಧ ರೀತಿಯ ಉತ್ತಮ ಸಹಕಾರ ಸಂಸ್ಥೆಗಳ ಅಧ್ಯಯನ ವರದಿಗಳ ಮಂಡನೆ ಹಾಗೂ ಸಾಧಕ ಬಾಧಕಗಳ ಮುಕ್ತ ಚರ್ಚೆಗಳು ನಡೆದು, ಸಹಕಾರ ಕ್ಷೇತ್ರದ ಭವಿಷ್ಯದ ದಾರಿಯನ್ನು ನಿರೂಪಿಸುವಂತಹ ಮಹತ್ವದ ಕಾರ್ಯ ನಡೆದಿರುವುದು ಶ್ಲಾಘನೀಯ ಹಾಗೂ ಸ್ವಾಗತಾರ್ಹ.

ಸಹಕಾರಿ ಕ್ಷೇತ್ರ ನಡೆದು ಬಂದ ದಾರಿಯ ಸಿಂಹಾವಲೋಕನ, ಪ್ರಚಲಿತ ವಿಷಯಗಳು, ಆಂತರಿಕ ವಿದ್ಯಮಾನಗಳು, ಕಾರ್ಯಚಟುವಟಿಕೆಗಳ ಮುಕ್ತ ಸಮಾಲೋಚನೆಗಳು ನಡೆದು ಪ್ರಸಕ್ತ ಅರ್ಥ ವ್ಯವಸ್ಥೆಯಲ್ಲಿ ಯಶಸ್ವಿಯಾಗಿ, ಉತ್ತಮ ಆರ್ಥಿಕ ಸಂಘಟನೆಗಳಾಗಿ ಕಾರ್ಯನಿರ್ವಹಿಸಲು ಮತ್ತು ಪ್ರಗತಿ ಕಂಡುಕೊಳ್ಳಲು ಸಾಧ್ಯ. ಈ ರಾಷ್ಟ್ರೀಯ ಸಮಾವೇಶದ ನಡವಳಿಗಳು ಸರಕಾರದ ಹಾಗೂ ಆರ್ಥಿಕ ಪರಿಣಿತರ ಮತ್ತು ಸಹಕಾರಿ ನೀತಿ ನಿರೂಪಿಸುವವರ ಗಮನಸೆಳೆದಾಗ ಈ ಪ್ರಯತ್ನಗಳು ಸಾರ್ಥಕ. ಇಂತಹ ಸಮಾವೇಶಗಳು ರಾಜ್ಯ ಮಟ್ಟದಲ್ಲೂ ನಡೆದು ಸರಕಾರದ ಗಮನ ಸೆಳೆಯುವುದು ಅವಶ್ಯಕ. ■

# ಸಹಕಾರ ಸಚಿವ ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್‌ರವರಿಂದ ಮೈಸೂರಿನಲ್ಲಿ ಸಮನ್ವಯ ಸೌಹಾರ್ದ ಸಹಕಾರಿ ನಿಯಮಿತದ ಉದ್ಘಾಟನೆ

ದಿನಾಂಕ : 25-03-2016 ರಂದು ಬೆಳಗ್ಗೆ 10.30ಕ್ಕೆ ಮೈಸೂರಿನ ಚಿನ್ನಮ್ಮ ಚನ್ನಬಸಪ್ಪ ಕಲ್ಯಾಣಮಂಟಪದಲ್ಲಿ ಸಮನ್ವಯ ಸೌಹಾರ್ದ ಸಹಕಾರಿ ನಿ., ಇದರ ಉದ್ಘಾಟನಾ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು.

ಸದರಿ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ, ಹಾಗೂ ಉದ್ಘಾಟನೆಯನ್ನು ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್, ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು, ಕರ್ನಾಟಕ ಸರ್ಕಾರ, ನೆರವೇರಿಸಿದರು.

ಶ್ರೀ ಗುರುನಾಥ್ ಜಾಂತಿಕರ, ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಶ್ರೀ ಹೆಚ್.ವಿ. ರಾಜೀವ್, ಮಾನ್ಯ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಮತ್ತು ಶ್ರೀ




ತೋಂಟದಾರ್ಯ, ಮಾನ್ಯ ನಿಕಟ ಪೂರ್ವ ವಿಧಾನ ಪರಿಷತ್ ಸದಸ್ಯರು ಇವರುಗಳು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

## ನಾನು ಸ್ವತಂತ್ರನಲ್ಲ

ಜಗತ್ತಿನಲ್ಲಿ ಅಸಂಖ್ಯ ವಸ್ತುಗಳಿವೆ. ಪ್ರತಿಯೊಂದು ವಸ್ತುವಿಗೂ ತನ್ನದೇ ಆದ ವ್ಯಕ್ತಿತ್ವವಿದೆ. ಆದ್ದರಿಂದ, ಆ ವಸ್ತು ಇನ್ನೊಂದು ವಸ್ತುವಿಗಿಂತ ಭಿನ್ನವಾಗಿದೆ. ಆ ವಸ್ತು ಸಣ್ಣದಿರಬಹುದು, ದೊಡ್ಡದಿರಬಹುದು. ಒಂದು ಇನ್ನೊಂದನ್ನು ಅವಲಂಬಿಸಿರುತ್ತದೆ. ಯಾವುದೇ ವಸ್ತು ತನ್ನಷ್ಟಕ್ಕೆ ತಾನು ಸ್ವತಂತ್ರವಾಗಿರಲು ಸಾಧ್ಯವಿಲ್ಲ. ಇದು ಭೂಮಿ, ಇಲ್ಲಿ ಮಣ್ಣು ಇದೆ. ಆ ಮಣ್ಣಿನಿಂದ ಮೂರ್ತಿ ಮಾಡುತ್ತೇವೆ. ಮೂರ್ತಿಗೆ ಸ್ವತಂತ್ರ ವ್ಯಕ್ತಿತ್ವ ಬರುತ್ತದೆ. ಅದು ಮಣ್ಣಿನಿಂದಲೇ ಮಾಡಿದ್ದು, ಆದರೂ ಮಣ್ಣು ಎನ್ನುವುದಿಲ್ಲ, ಮೂರ್ತಿ ಎನ್ನುತ್ತೇವೆ. ಆ ಮೂರ್ತಿಯಿಂದ ಮಣ್ಣನ್ನು ಪ್ರತ್ಯೇಕಿಸಿದರೆ, ಮೂರ್ತಿ ತನ್ನಷ್ಟಕ್ಕೆ ತಾನು ಇರಲು ಸಾಧ್ಯವಿಲ್ಲ. ಹೀಗೆ ಯಾವ ವಸ್ತುವೂ ಸ್ವತಂತ್ರವಲ್ಲ. ಇದೊಂದು ತರ್ಕ.




ಆದ್ದರಿಂದ, ಮನುಷ್ಯ ಜಗತ್ತನ್ನು ಉಪೇಕ್ಷೆ ಮಾಡಬಾರದು. ಈಗ ಒಂದು ಹೂವು ಇದೆ. ಅದರಲ್ಲಿ ರಸವಿದೆ, ಸೌಂದರ್ಯವಿದೆ, ಬಣ್ಣವಿದೆ, ಸುವಾಸನೆ ಇದೆ. ಆದರೆ ಅದು ಸ್ವತಂತ್ರವೇ? ಹೂವಿಗೆ ಎಲೆ ಬೇಕು, ಎಲೆಗೆ ಕಾಂಡ ಬೇಕು, ಕಾಂಡಕ್ಕೆ ಬೇರು ಬೇಕು, ಬೇರಿಗೆ ನೆಲ ಬೇಕು, ನೆಲಕ್ಕೆ ನೀರು ಬೇಕು... ಹೀಗೆ ಸಂಬಂಧಗಳು ಹೆಣೆದುಕೊಂಡಿರುತ್ತವೆ. ಮನುಷ್ಯ ಇದನ್ನು ಅರ್ಥಮಾಡಿಕೊಳ್ಳಬೇಕು. ಇದನ್ನು ಮರೆತು ಮೆರೆಯಬಾರದು. ಮನುಷ್ಯನಿಗೆ ಈ ಸಂಬಂಧಗಳು ಗೊತ್ತಾದರೆ, ಶಾಂತಜೀವನ ಸಾಗಿಸುತ್ತಾನೆ. ಅಂತರಂಗದ ಗರ್ವ ಕಡಿಮೆಯಾಗುತ್ತದೆ. ಸಮಾಧಾನವಾಗುತ್ತದೆ.

ನಾನೂ ಸ್ವತಂತ್ರನಲ್ಲ, ಜಗತ್ತಿನ ಯಾವ ವಸ್ತೂಗಳೂ ಸ್ವತಂತ್ರವಲ್ಲ, ನಾನೂ ಅಪೂರ್ಣ, ಇಡೀ ಜಗತ್ತೆ ಅಪೂರ್ಣ, ಪೂರ್ಣ ಒಂದೇ ಅದು ದೇವರು. ಪೂರ್ಣಮದಃ, ಪೂರ್ಣಮಿದಂ. ನಮ್ಮ ಮನಸ್ಸಿನೊಳಗೆ ಪರಮ ಪವಿತ್ರ ಪ್ರೇಮ ಬಂತು.... ಅಳಿಯಾಸೆ ಹೋಗುತ್ತದೆ. ಬದುಕನ್ನು ತಿಂದು ಹಾಕುವ ಆಸೆಗಳು 'ಅಳಿಯಾಸೆ'. ಅದು ವಾಂಛೆ. ಬದುಕನ್ನು ಪೋಷಿಸುವ, ಸುಂದರಗೊಳಿಸುವ ಆಸೆಗಳೂ ಇವೆ. ಅದು ಬೇಕು, ಇದು ಬೇಕು ಎಂದು ಆಸೆಗಳನ್ನು ಮನಸ್ಸು ಹುಟ್ಟಿಹಾಕುತ್ತದೆ. ಬದುಕು ಇರುತ್ತದೆ, ಆಸೆಯೂ ಇರುತ್ತದೆ. ಮನುಷ್ಯನಿಗೆ ಗೊತ್ತಿರಬೇಕು, ಚೆನ್ನಾಗಿರುವ ವಸ್ತುಗಳ ಜೊತೆ ಬದುಕಬೇಕು. ಭಕ್ತಿ ಬದುಕನ್ನು ಸುಂದರವಾಗಿ ರೂಪಿಸಿರುತ್ತದೆ. ಮನುಷ್ಯ ಶಿಲ್ಪಿ ಕಲ್ಲಲ್ಲಿ ಶಿವ, ಪಾರ್ವತಿ, ವಿಷ್ಣು ಬೇಕಾದುದನ್ನು ಮೂಡಿಸುತ್ತಾನೆ, ಅದು ಕೌಶಲ. ಹಾಗೇ ನಮ್ಮ ಬದುಕನ್ನು ಪ್ರೇಮದ ಬಾಣದಿಂದ ಕೆತ್ತುತ್ತ ಕೆತ್ತುತ್ತ ಸುಂದರವಾಗಿಸಬೇಕು. ಭಕ್ತನ ಬದುಕು ಸುಂದರ ಬದುಕು. ಭಕ್ತಿಯಿಂದಾಗುವ ಮತ್ತೊಂದು ಲಾಭದ ವಾಂಛೆ.

**ಬರಪೀಡಿತ ಪರಿಹಾರ ಕಾರ್ಯಗಳಿಗಾಗಿ ಸಹಾಯ ನೀಡುವ ಕುರಿತು**

## ರಾಜ್ಯದ ಸೌಹಾರ್ದ ಸಹಕಾರಿಗಳಲ್ಲಿ ಒಂದು ಮನವಿ

ಆತ್ಮೀಯ ಸಹಕಾರಿ ಬಂಧುಗಳೇ,

ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಅನಾವೃಷ್ಟಿಯಿಂದಾಗಿ ಹಾಗೂ ಬೇಸಿಗೆಯ ಉರಿ ಬಿಸಿಲಿನಿಂದಾಗಿ ಬರಗಾಲ ಸಂಭವಿಸಿದ್ದು, ಸಹಸ್ರಾರು ಜನ ಕುಡಿಯಲು ನೀರು ಇಲ್ಲದೇ ಪರಿತಪಿಸುವಂತಾಗಿದೆ. ಅನೇಕರು ಮಳೆಯನ್ನೇ ಅವಲಂಬಿಸಿ ಜೀವನ ನಡೆಸುವಂತವರಾಗಿದ್ದು, ಬೇರೆ ರಾಜ್ಯಗಳಿಗೆ, ಜಿಲ್ಲೆಗಳಿಗೆ ವಲಸೆ ಹೋಗುತ್ತಿದ್ದಾರೆ. ಇದು ತಮಗೆಲ್ಲ ತಿಳಿದ ವಿಷಯವಾಗಿದೆ. ಸರಕಾರ ಹಾಗೂ ಸಂಘ ಸಂಸ್ಥೆಗಳು ನೆರವು ನೀಡುವಲ್ಲಿ ಮುಂದಾಗಿವೆ. ಸೌಹಾರ್ದ ಸಹಕಾರಿಗಳು ಸಹ ಈ ಸಂದರ್ಭದಲ್ಲಿ ನೆರವು ನೀಡಲು ಮುಂದಾಗುವುದು ಅವಶ್ಯವಾಗಿದೆ.

ರಾಜ್ಯದ ಸೌಹಾರ್ದ ಸಹಕಾರಿಗಳು ಈ ಹಿಂದೆ ಉತ್ತರ ಕರ್ನಾಟಕ ಹಾಗೂ ಜಮ್ಮು ಕಾಶ್ಮೀರ ಮತ್ತು ತಮಿಳುನಾಡು ರಾಜ್ಯಗಳಲ್ಲಿ ನೆರೆ ಹಾವಳಿಯಾದಾಗ, ತಾವುಗಳೆಲ್ಲ ನೆರೆ ಸಂತ್ರಸ್ತರಿಗೆ ಉದಾರವಾಗಿ ನೆರವು ನೀಡಿರುವುದಕ್ಕೆ ಸಂಯುಕ್ತ ಸಹಕಾರಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಅದರಂತೆ ಈ ಬಾರಿ ಬರ ಪೀಡಿತರಿಗೆ ಸಾಂತ್ವನವನ್ನು ಹೇಳುವುದರ ಜೊತೆಗೆ ಅವರಿಗೆ ನೆರವನ್ನು ನೀಡಲು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ಅಪೇಕ್ಷಿಸುತ್ತದೆ.

ಜಿಲ್ಲೆಗಳ ಸೌಹಾರ್ದ ಸಹಕಾರಿಗಳು ಆಯಾ ಜಿಲ್ಲೆಯ ಸಂಯುಕ್ತ ಸಹಕಾರಿಯ ನಿರ್ದೇಶಕರ ನೇತೃತ್ವದಲ್ಲಿ ತತ್‌ಕ್ಷಣವೇ ಒಂದು ಸಭೆ ಮಾಡಿ, ಬರ ಪೀಡಿತರ ಕಲ್ಯಾಣ ಸಮಿತಿಯನ್ನು ರಚಿಸಿಕೊಂಡು, ನೀರಿನ ಅಭಾವವಿರುವ ಪ್ರದೇಶಗಳಿಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುವುದು ಮತ್ತು ಬೋರ್‌ವೆಲ್ ಹಾಕಿಸುವುದು, ಹಾಲಿ ಇರುವ ನೀರು ಸರಬರಾಜು ವ್ಯವಸ್ಥೆಗಳಲ್ಲಿ ರಿಪೇರಿ ಮಾಡಿಸುವುದು, ಮೇವು ಒದಗಿಸುವುದು ಹಾಗೂ ಸ್ಥಳೀಯವಾಗಿ ನಿಮಗೆ ಸರಿಯೆನಿಸುವ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ವಿನಂತಿಸುತ್ತದೆ.

**ಈ ವಿಪತ್ತಿನ ಪರಿಹಾರ ಕಾರ್ಯದಲ್ಲಿ ಭಾಗಿಗಳಾಗೋಣ, ಮಾನವೀಯತೆಯನ್ನು ಮೆರೆಯೋಣ.**

**ಗುರುನಾಥ ಜಾಂತಿಕರ**
ಅಧ್ಯಕ್ಷರು

**ಹೆಚ್. ವಿ ರಾಜೀವ್**
ಉಪಾಧ್ಯಕ್ಷರು

## ಸೌಹಾರ್ದ ಸಹಕಾರಿಗಳು ಗಮನಿಸಬೇಕಾದ ಶಾಸನಬದ್ಧ ಕಾರ್ಯಗಳು

**ವಾರ್ಷಿಕ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ:** ಆರ್ಥಿಕ ವರ್ಷ 2015–2016 ಮುಕ್ತಾಯವಾಗಿದೆ. ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ವಾರ್ಷಿಕ ಲೆಕ್ಕಪತ್ರಗಳು ಅಂತಿಮಗೊಂಡಿವೆ. ಲೆಕ್ಕಪರಿಶೋಧನೆಗಾಗಿ ಸಿದ್ಧತೆಯನ್ನು ಮಾಡಿಕೊಳ್ಳಬೇಕಿದೆ. ಅಂತಿಮಗೊಂಡ ವಾರ್ಷಿಕ ಲೆಕ್ಕಪತ್ರಗಳನ್ನು ಆಡಳಿತ ಮಂಡಲಿಗೆ ಮಂಡಿಸಿ, ಅನುಮೋದನೆ ಪಡೆದು ಏಪ್ರಿಲ್ 30 ರೊಳಗಾಗಿ ಸಲ್ಲಿಸಲು ಸಾಮಾನ್ಯ ಸಭೆಯಲ್ಲಿ ನೇಮಕವಾಗಿರುವ ಲೆಕ್ಕಪರಿಶೋಧಕರನ್ನು ಸಂಪರ್ಕಿಸಿ, ಲೆಕ್ಕಪರಿಶೋಧನೆಯ ಕಾರ್ಯ ಮಾಡಬೇಕಿದೆ. ಲೆಕ್ಕಪರಿಶೋಧನೆಯ ಕಾರ್ಯ ಸೆಪ್ಟೆಂಬರ್ 1ನೇ ತಾರೀಖಿನ ಒಳಗಾಗಿ ಮುಗಿಯಬೇಕು. ಲೆಕ್ಕಪರಿಶೋಧನೆಯಾದ ಲೆಕ್ಕಪತ್ರಗಳ ವರದಿಯನ್ನು ಆಡಳಿತ ಮಂಡಲಿಯಲ್ಲಿ ಮಂಡಿಸಿ, ಲೆಕ್ಕಪರಿಶೋಧನಾ ಆಕ್ಷೇಪಗಳಿಗೆ ಸಮಜಾಯಿಷಿಗಳನ್ನು ಸಿದ್ಧಪಡಿಸಿ, ವಾರ್ಷಿಕ ಸಾಮಾನ್ಯ ಸಭೆಗೆ ಅನುಮೋದನೆಗಾಗಿ ಮಂಡಿಸುವಂತಾಗಬೇಕು.

ವಾರ್ಷಿಕ ಸಾಮಾನ್ಯ ಸಭೆ ಸೆಪ್ಟೆಂಬರ್ 25ರ ಒಳಗಾಗಿ ನಡೆಯಲೇಬೇಕು. ಈ ಬಗ್ಗೆ ಮುಖ್ಯಕಾರ್ಯನಿರ್ವಾಹಕರು ಕಾರ್ಯನಿರತರಾಗುವುದು ಅತ್ಯಂತ ಅವಶ್ಯಕ. 97ನೇ ಸಂವಿಧಾನ ತಿದ್ದುಪಡಿಯ ನಂತರ ಸೌಹಾರ್ದ ಸಹಕಾರಿ ಕಾಯ್ದೆಗೆ 2013ರಲ್ಲಿ ತಿದ್ದುಪಡಿ ತರಲಾಗಿದೆ. ಈ ಕಾಯ್ದೆಯ ಅಧ್ಯಾಯ 5 ಕಲಂ 32 ರಲ್ಲಿ ತಿಳಿಸಿರುವಂತೆ ದಾಖಲೆಗಳನ್ನು ಹಾಗೂ ಲೆಕ್ಕಪತ್ರಗಳನ್ನು ಇಡಬೇಕಾಗುತ್ತದೆ ಹಾಗೂ 33 ರನ್ವಯ ಲೆಕ್ಕಪರಿಶೋಧನೆಯನ್ನು ಮಾಡಿಸುವುದು ಅಗತ್ಯ. ವರ್ಷ ಮುಕ್ತಾಯವಾದ ಒಂದು ತಿಂಗಳೊಳಗಾಗಿ ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕರು ಇಲಾಖೆಯ ವೆಬ್ ಸೈಟ್‌ನಲ್ಲಿ ಲೆಕ್ಕಪರಿಶೋಧಕರ ಪಟ್ಟಿಯನ್ನು ಪ್ರಕಟಿಸುತ್ತಾರೆ. ಪ್ರತಿಯೊಂದು ಸಹಕಾರಿಯು ಈ ಪಟ್ಟಿಯಲ್ಲಿ ಇರುವ ಒಬ್ಬ ಲೆಕ್ಕಪರಿಶೋಧಕರನ್ನು ಸೌಹಾರ್ದ ಸಹಕಾರಿಗಳ ವಾರ್ಷಿಕ ಮಹಾಸಭೆಗಳಲ್ಲಿ ಆಯ್ಕೆ ಮಾಡಿಕೊಂಡು, ಸದರಿಯವರಿಂದ ಲೆಕ್ಕಪರಿಶೋಧನೆ ಮಾಡಿಸುವ ಕ್ರಮ ಇಡುವುದು ಅಗತ್ಯ.

## ಕಲಬುರಗಿಯ ಬರಪೀಡಿತ ಪ್ರದೇಶದ ಜಾನುವಾರಗಳಿಗೆ "ನಂದಿವನ" ಆಶ್ರಯತಾಣ : ನಿಸ್ವಾರ್ಥ ಶರಣಜೀವಿ ಶ್ರೀ ಬಸವರಾಜ ದಿಗ್ಗಾವಿಯವರ ಸೇವೆ ಪ್ರಶಂಸಾರ್ಹ



ಶ್ರೀ ಬಸವರಾಜ ದಿಗ್ಗಾವಿ



ನಂದಿ ವನದಲ್ಲಿ ಜಾನುವಾರುಗಳು

ಶ್ರೀ ಬಸವರಾಜ ದಿಗ್ಗಾವಿ ಮೂಲತಃ ಕಲಬುರಗಿಯವರು. ಈಗಲೂ ಕಲಬುರಗಿಯಲ್ಲಿ ವಾಸ. ಸುಸಂಸ್ಕೃತ ಕುಟುಂಬದಲ್ಲಿ ದಿನಾಂಕ 01–10–1971ರಲ್ಲಿ ಜನಿಸಿದ ಇವರು ಕಲಬುರಗಿಯ ವಿಶ್ವವಿದ್ಯಾಲಯದ ಎಂ.ಎಸ್ಸಿ. ಸ್ನಾತಕೋತ್ತರ ಪದವೀಧರರು.

ಶೈಕ್ಷಣಿಕ, ಸಾಮಾಜಿಕ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ನಿರಂತರ ಸೇವೆ ಸಲ್ಲಿಸಿ, ಅದ್ಭುತ ಸಾಧನೆ ಮಾಡಿರುವ ಕ್ರಿಯಾಶೀಲ ವ್ಯಕ್ತಿ. ಇವರ ಆದರ್ಶತೆಗೆ, ಪ್ರತಿಭೆಗೆ, ಕ್ರಿಯಾಶೀಲತೆಗೆ ಹಾಗೂ ಸಾಧನೆಗಳಿಗೆ ಲೆಕ್ಕವಿಲ್ಲದಷ್ಟು ಪುರಸ್ಕಾರಗಳು ಹುಡುಕಿಕೊಂಡು ಬಂದಿವೆ.

ಶ್ರೀ ಬಸವರಾಜ ದಿಗ್ಗಾವಿಯವರು ಮಾಡುವಂತಿರಬೇಕು, ಮಾಡದಂತಿರಬೇಕು, ಮಾಡುವ ಮಾಟದಲ್ಲಿ ತಾನಿಲ್ಲದಂತಿರಬೇಕು ಎಂಬಂತೆ ಜಗವು ನಗುತಿರಲಿ, ಜಗದ ಅಳುವು ನನಗಿರಲಿ ಎಂಬ ಭಾವದ ಯಾವುದೇ ಕೀರ್ತಿ ಪ್ರಸಿದ್ಧಿ ಪಡೆಯಬೇಕೆಂಬ ಮನಸ್ಸಿರದ ಪ್ರಚಾರ ಬಯಸದ ನಿಸ್ವಾರ್ಥ ಭಾವದ ಸರಳ ಶರಣ ಜೀವಿ.

### ಆರ್.ಬಿ.ಐ. ಹೊಸ ಸೂತ್ರ : ಬ್ಯಾಂಕ್ ಸಾಲ ಅಗ್ಗ

ಹೊಸ ಹಣಕಾಸು ವರ್ಷವಾದ ಏಪ್ರಿಲ್ 1 ರಿಂದ ಅನ್ವಯಿಸುವಂತೆ ಠೇವಣಿಗಳ ಮೇಲಿನ ಹೆಚ್ಚುವರಿ ವೆಚ್ಚದ ಮೇಲೆ ಬಡ್ಡಿ ದರವನ್ನು ನಿಗದಿ ಮಾಡುವಂತೆ ಆರ್‌ಬಿಐ, ಬ್ಯಾಂಕ್‌ಗಳಿಗೆ ನಿರ್ದೇಶನ ನೀಡಿದೆ. ಅದರಂತೆ ಬ್ಯಾಂಕ್‌ಗಳು ಬಡ್ಡಿ ದರ ನಿಗದಿಗೆ ಹೊಸ ಸೂತ್ರ ಅಳವಡಿಸಿ ಕೊಂಡಿವೆ. ಹೊಸ ಬಡ್ಡಿ ದರಗಳು ಕೆಲ ಸಾಲಗಳಿಗೆ ಸಂಬಂಧಿಸಿದಂತೆ ಈ ಮೊದಲಿನ ಮೂಲ ದರಕ್ಕಿಂತ (ಕನಿಷ್ಠ ಬಡ್ಡಿದರ) ಶೇ 1ರಷ್ಟು ಕಡಿಮೆ ಇರಲಿದೆ ಎಂದು ಪರಿಣತರು ಅಭಿಪ್ರಾಯಪಟ್ಟಿದ್ದಾರೆ. ಇದರಿಂದಾಗಿ ಸಾಲಗಾರರ ಸಮಾನ ಮಾಸಿಕ ಕಂತಿನ (ಇಎಂಎಸ್) ಪ್ರಮಾಣ ಕಡಿಮೆಯಾಗಲಿದೆ.

ಶ್ರೀಯುತರಿಗೆ ಹಾಗೂ ಅವರ ಜೊತೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅವರ ಕುಟುಂಬದ ಸದಸ್ಯರಿಗೆ ಮತ್ತು ಈ ಕಾರ್ಯದಲ್ಲಿ ಅವರಿಗೆ ನೆರವು ನೀಡುತ್ತಿರುವ ಎಲ್ಲರಿಗೆ ಸಂಯುಕ್ತ ಸಹಕಾರಿಯು ತುಂಬು ಹೃದಯದಿಂದ ಅಭಿನಂದಿಸುತ್ತದೆ.

ಶ್ರೀಯುತರು 23–11–2015 ರಂದು ಕಲಬುರಗಿಯ ಹಾರುತಿ ಗ್ರಾಮದ ತಮ್ಮ ಸ್ವಂತ 18 ಎಕರೆ ತೋಟದಲ್ಲಿ ಆಳಂದ, ಕಲಬುರಗಿ, ಅಫಜಲಪುರ ಬರಪೀಡಿತ ಪ್ರದೇಶದ ರೈತರ ಎತ್ತುಗಳಿಗೆ ಉಚಿತ ಮೇವು, ಕುಡಿಯಲು ನೀರಿನ ಹಾಗೂ ಆರೋಗ್ಯ ರಕ್ಷಣೆ ಕಾರ್ಯವನ್ನು ಪ್ರಾರಂಭಿಸಿದ್ದಾರೆ. ಈ ಆಶ್ರಯ ತಾಣದಲ್ಲಿ ಇದುವರೆಗೆ ಸುಮಾರು 1400 ಎತ್ತುಗಳು ಆಶ್ರಯ ಪಡೆಯುತ್ತಿವೆ. ಈ ಜಾನುವಾರಗಳನ್ನು ನೋಡಿಕೊಳ್ಳುವ ಸುಮಾರು 700 ರೈತರಿಗೆ ಪ್ರತಿದಿನ ಬೆಳಗಿನ ಉಪಹಾರ, ಮಧ್ಯಾಹ್ನ ಊಟ, ರಾತ್ರಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಮಾಡಿರುವುದು ಅತ್ಯಂತ ಮಾದರಿಯ ಹಾಗೂ ಅನುಕರಣೀಯ ಸೇವಾ ಕೈಂಕರ್ಯವಾಗಿದೆ. ಈ ನಂದಿವನದ ಎತ್ತು ಮತ್ತು ರೈತರ ಆಶ್ರಯ ತಾಣವನ್ನು ಮುಂದಿನ ವರ್ಷ ಬರುವ ಮಳೆಗಾಲದವರೆಗೆ ನಿರಂತರವಾಗಿ ನೋಡಿಕೊಳ್ಳಲಾಗುವುದು. ಈ ಅವಧಿಯಲ್ಲಿ ಅಲ್ಲಿ ವಸತಿ ಮಾಡಿರುವ ರೈತರಿಗೆ ಪಶುಸಂಗೋಪನೆ, ಆಧುನಿಕ ಹಾಗೂ ಬರಗಾಲದ ಬೆಳೆಗಳ ಬಗ್ಗೆ ತರಬೇತಿಯನ್ನು ಸಹ ನೀಡುತ್ತಿರುವುದು ಶ್ಲಾಘನೀಯವಾಗಿದೆ. ಕೇಳರಿಯದ ಹಾಗೂ ವಿನೂತನ ಮಾದರಿಯ ಸೇವಾ ಕೈಂಕರ್ಯವನ್ನು ಪ್ರಾರಂಭಿಸಿ, ಜಾನುವಾರುಗಳಿಗೆ ಆಶ್ರಯತಾಣವನ್ನು ನಡೆಸುತ್ತಿರುವ ಶ್ರೀ ಬಸವರಾಜ ದಿಗ್ಗಾವಿಯವರಿಗೆ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಪರವಾಗಿ ಅಭಿನಂದನೆಗಳು.

### ಆರ್ಥಿಕ ಮಾರುಕಟ್ಟೆಯಲ್ಲಿ ಸಹಕಾರ ಕ್ಷೇತ್ರದ ಸ್ಥಿರೀಕರಣ ಕುರಿತು ಮೈಸೂರಿನಲ್ಲಿ 31ನೇ ರಾಷ್ಟ್ರೀಯ ಸಮಾವೇಶ ಹಾಗೂ ಸಹಕಾರಿ ಚಿಂತಕರ ವಿಚಾರಗೋಷ್ಠಿ

# ಸಹಕಾರಿಗಳು ಜೀವನದ ಎಲ್ಲಾ ಸ್ತರಗಳಲ್ಲಿ ಕಾರ್ಯನಿರ್ವಹಿಸುವುದು ಅವಶ್ಯಕ

## ಮೈಸೂರು ವಿಶ್ವವಿದ್ಯಾಲಯ ಕುಲಪತಿ ಡಾ.ಕೆ.ಎಸ್.ರಂಗಪ್ಪ ಕರೆ

ಇಂಡಿಯನ್ ಸೊಸೈಟಿ ಫಾರ್ ಸ್ಟಡೀಸ್ ಇನ್ ಕೋ–ಆಪರೇಷನ್ ಇವರ ನೇತೃತ್ವದಲ್ಲಿ ಮೈಸೂರು ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಮೈಸೂರಿನಲ್ಲಿ ದಿನಾಂಕ 5, 6 ಮಾರ್ಚ್ 2016 ಈ ಎರಡು ದಿನಗಳಂದು ವಿಚಾರಗೋಷ್ಠಿಯನ್ನು ಏರ್ಪಡಿಸಲಾಗಿತ್ತು. ವಿಚಾರಗೋಷ್ಠಿಯನ್ನು ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಡಾ.ಕೆ.ಎಸ್.ರಂಗಪ್ಪರವರು ಉದ್ಘಾಟಿಸಿ, ಸಹಕಾರಿ ಕ್ಷೇತ್ರ ಸಾಕಷ್ಟು ಕಾರ್ಯವನ್ನು ಮಾಡುತ್ತಿದೆ. ಆದರೆ, ಇಂದಿನ ಆರ್ಥಿಕ ಮಾರುಕಟ್ಟೆ ಅತ್ಯಂತ ವೇಗದ ಬದಲಾವಣೆಯನ್ನು ಕಾಣುತ್ತಿದೆ. ವೇಗವಾಗಿ ಓಡುತ್ತಿದೆ. ಪೈಪೋಟಿ ಹೆಚ್ಚಿದೆ. ಹೀಗಾಗಿ ಸಹಕಾರಿ ಸಂಸ್ಥೆಗಳಿಗೆ ಈ ವ್ಯವಸ್ಥೆಯಲ್ಲಿ ಕಾರ್ಯನಿರ್ವಹಣೆ ಮಾಡುವಾಗ ಬದಲಾವಣೆಗೆ ಸ್ಪಂದಿಸುವುದು ಅಗತ್ಯ. ಜೀವನದ ಎಲ್ಲಾ ಸ್ತರಗಳಲ್ಲಿ ಕಾರ್ಯನಿರ್ವಹಿಸಲು ಸನ್ನದ್ಧರಾಗಬೇಕು ಎಂದು ತಿಳಿಸಿದರು. ಸಹಕಾರಿ ಸಂಸ್ಥೆಗಳಲ್ಲಿ ವೃತ್ತಿಪರ ಆಡಳಿತ ಹಾಗೂ ಉತ್ತಮ ಕಾರ್ಯನಿರ್ವಹಣೆಯನ್ನು ಸಹಕಾರಿ ಸಂಸ್ಥೆಗಳು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಐ.ಎಸ್.ಎಸ್.ಸಿ. ಅಧ್ಯಕ್ಷರು, ರಾಷ್ಟ್ರೀಯ ಸಹಕಾರ ಯೂನಿಯನ್‌ನ ಉಪಾಧ್ಯಕ್ಷರೂ ಆಗಿರುವ ಶ್ರೀ ಘನಶಾಮಭಾಯಿ ಅಮೀನರವರು ವಹಿಸಿ, ರಾಷ್ಟ್ರದ ಅರ್ಥವ್ಯವಸ್ಥೆಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಗಣನೀಯವಾಗಿದೆ. ಆದಾಗ್ಯೂ, ಸಹ ಸಹಕಾರ ಕ್ಷೇತ್ರದ ಕಾರ್ಯಚಟುವಟಿಕೆ ಹಾಗೂ ಬೆಳವಣಿಗೆಗಳ ಬಗ್ಗೆ ಚಿಂತನೆಗಳು ನಡೆಯುತ್ತಿರಬೇಕು. ಇದು ಸಹಕಾರಿ ಚಿಂತಕರ ಸಭೆ. ಅವರುಗಳು ಕಾರ್ಯನಿರ್ವಹಿಸುತ್ತಿರುವ ಸಹಕಾರಿ ಕ್ಷೇತ್ರದ ಬಗ್ಗೆ ಸಮಗ್ರ ಮಾಹಿತಿಯನ್ನು ಸಭೆಗೆ ನೀಡುವುದರೊಂದಿಗೆ ಮುಂಬರುವ ದಿನಗಳಲ್ಲಿ ಸಹಕಾರಿ ಕ್ಷೇತ್ರ ಹೇಗೆ ಕಾರ್ಯನಿರ್ವಹಿಸಬೇಕು ಎಂಬ ಬಗ್ಗೆ ಮಾಹಿತಿ ಒದಗಿಸುವ ವಿಚಾರಗೋಷ್ಠಿ ಇದಾಗಿದೆ ಎಂದು ತಿಳಿಸಿದರು. ಡಾ. ಮೀನಾಕ್ಷಿ ರಾಜೀವರವರು ದಿಕ್ಸೂಚಿ ಭಾಷಣವನ್ನು ಮಾಡಿದರು. ಕಾರ್ಯಕ್ರಮದ ಅಂಗವಾಗಿ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು.

ನಂತರ ನಡೆದ ವಿಚಾರಗೋಷ್ಠಿಯಲ್ಲಿ ವಿವಿಧ ರಾಜ್ಯಗಳ ಸಹಕಾರಿ ಕ್ಷೇತ್ರದ ತಜ್ಞರು ಸಹಕಾರ ಕ್ಷೇತ್ರದ ವಿವಿಧ ವಿಷಯಗಳ ಮಂಡನೆ ನಂತರ ಕೆಲವು ಯಶೋಗಾಥೆಗಳ ವಿವರ ನೀಡಿ, ಸಹಕಾರಿ ಕ್ಷೇತ್ರದಲ್ಲಿ ಇವರುಗಳು ಅನುಕರಿಸುವ ಮಾರ್ಗ ಅನುಕರಣೀಯ ಎಂದು ತಿಳಿಸಿದರು.



ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಹಾಗೂ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ಹಾಗೂ ಸಾಧನೆಗಳ ಬಗ್ಗೆ ವಿವರಗಳನ್ನು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ.ಪಾಟೀಲರವರು ಮಂಡಿಸಿದರು. ಡಾ. ನಂದೀಶ ಹಿರೇಮಠರವರು ಸೌಹಾರ್ದ ಸಹಕಾರಿ ಕ್ಷೇತ್ರದ ಸಾಧನೆ ಸಹಕಾರಿಗಳಿಗೆ ನೀಡಿದ ಆರ್ಥಿಕ ಸ್ವಾತಂತ್ರ್ಯದ ಫಲ.

ಈ ರೀತಿಯ ಸ್ವಾಯತ್ತ ಕಾಯ್ದೆಗಳು ದೇಶದ 9 ರಾಜ್ಯಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಆದರೆ, ಕರ್ನಾಟಕದಲ್ಲಿ ಈ ಕಾಯ್ದೆಯಡಿಯಲ್ಲಿ ಸೌಹಾರ್ದ ಸಹಕಾರಿಗಳಿಂದಲೇ ಆಯ್ಕೆಯಾದ ಫೆಡರಲ್ ಸಂಸ್ಥೆಯ ವ್ಯವಸ್ಥೆಯಿದ್ದು, ಸೌಹಾರ್ದ ಸಹಕಾರಿ ಕಾರ್ಯ ಚಟುವಟಿಕೆಗಳ ಶಾಸನಬದ್ಧ ನಿಯಂತ್ರಣದ ಅಧಿಕಾರದ ಜೊತೆಗೆ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಅಗತ್ಯವಾಗುವ ಶಿಕ್ಷಣ, ತರಬೇತಿ ಹಾಗೂ ಪ್ರಚಾರಗಳನ್ನು ನಿರ್ವಹಿಸುವ ಸಂಸ್ಥೆಯಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಕಾರ್ಯನಿರ್ವಹಿಸುತ್ತಿದೆ. ದೇಶದಲ್ಲಿ ಇದೊಂದು ಮಾದರಿಯ ಹಾಗೂ ಅನುಕರಣೀಯವಾದ ವ್ಯವಸ್ಥೆಯಾಗಿದೆ ಎಂದು ತಿಳಿಸಿದರು. ವಿವಿಧ ರಾಜ್ಯಗಳ ಸಹಕಾರಿ ತಜ್ಞರು ಕರ್ನಾಟಕದಲ್ಲಿ ಈ ಕ್ಷೇತ್ರದ ಸಾಧನೆ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸಿದರು.

ಕಾರ್ಯಕ್ರಮದ ವ್ಯವಸ್ಥೆಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವತಿಯಿಂದ ಸಹಯೋಗ ನೀಡಲಾಗಿತ್ತು.

# ಸಂಯುಕ್ತ ಸಹಕಾರಿಯ ಸಿಬ್ಬಂದಿಗಳಿಗೆ ಕುಪ್ಪಳ್ಳಿಯಲ್ಲಿ 2 ದಿನಗಳ ಅಧಿಪ್ರೇರಣೆ ತರಬೇತಿ:
## ಸೌಹಾರ್ದ ಸಹಕಾರಿಗಳ ಆಶಯಗಳಿಗೆ ಸ್ಪಂದಿಸಿ - ಶ್ರೀ ಗುರುನಾಥ ಜಾಂತಿಕರ



ತರಬೇತಿಯ ಉದ್ಘಾಟನಾ ಕಾರ್ಯಕ್ರಮ

ದಿನಾಂಕ 12, 13 ಮಾರ್ಚ್ 2016 ರಂದು ಶಿವಮೊಗ್ಗ ಜಿಲ್ಲೆಯ ಕುಪ್ಪಳ್ಳಿಯಲ್ಲಿ ಸಂಯುಕ್ತ ಸಹಕಾರಿಯ ಎಲ್ಲಾ ಸಿಬ್ಬಂದಿಯವರಿಗಾಗಿ "ಅಧಿಪ್ರೇರಣೆ ತರಬೇತಿ"ಯನ್ನು ಏರ್ಪಡಿಸಲಾಗಿತ್ತು. ಕಾರ್ಯ ಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀ ಗುರುನಾಥ ಜಾಂತಿಕರ, ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿ, ಮಾತನಾಡಿದ ಅವರು, ಸಹಕಾರ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆಗಳನ್ನು ಗಮನಿಸಿದ್ದೇವೆ. ಪ್ರಗತಿಯ ವೇಗಕ್ಕೆ ನಾವು ಹೊಂದಿಕೊಳ್ಳುವುದು ಅವಶ್ಯಕ. ಸೌಹಾರ್ದ ಸಹಕಾರಿಗಳು ಅನೇಕ ವಿಷಯಗಳ ಬಗ್ಗೆ ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸುತ್ತಾರೆ. ಕೇಂದ್ರ ಕಛೇರಿಗೆ ಭೇಟಿ ನೀಡುತ್ತಾರೆ. ಅಂತಹ ಸಂದರ್ಭಗಳಲ್ಲಿ ಅವರ ಬೇಡಿಕೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುವ ಮನೋಭಾವ ಬೆಳೆಸಿಕೊಳ್ಳಿ ಎಂದು ತಿಳಿಸಿದರು. ಇಂತಹ ಉತ್ತಮ ಪರಿಸರದಲ್ಲಿ, ಪ್ರಕೃತಿ ಸೌಂದರ್ಯದಲ್ಲಿ ಸಂಯುಕ್ತ ಸಹಕಾರಿಯ ಸಿಬ್ಬಂದಿಯವರಿಗೆ ಅಧಿಪ್ರೇರಣೆ ಕಾರ್ಯಕ್ರಮವನ್ನು ಏರ್ಪಡಿಸಿರುವ ಉದ್ದೇಶ ಇದಾಗಿದೆ ಎಂದರು. ಸಿಬ್ಬಂದಿಯವರು ಇದರ ಪೂರ್ಣ ಪ್ರಯೋಜನ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಪ್ರಾರಂಭದಲ್ಲಿ ಶ್ರೀಮತಿ ಕಾವ್ಯಶ್ರೀಯವರಿಂದ ಪ್ರಾರ್ಥನೆಯಾದ ನಂತರ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ವೈ.ಕುಮಾರರವರಿಂದ ಸ್ವಾಗತ. ನಂತರದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಪ್ರಾಸ್ತಾವಿಕ ಭಾಷಣದಲ್ಲಿ ಸಿಬ್ಬಂದಿಯವರು ಸಂಯುಕ್ತ ಸಹಕಾರಿಯ ಕಾರ್ಯ ಚಟುವಟಿಕೆಗಳ ಬಗ್ಗೆ ಪೂರ್ಣ ಮಾಹಿತಿಯನ್ನು ಹೊಂದಿ, ಕಾರ್ಯನಿರ್ವಹಿಸುವುದು ಅಗತ್ಯ, ಅದಕ್ಕಾಗಿ ಈ ತರಬೇತಿ ಸಿಬ್ಬಂದಿಯವರಲ್ಲಿ ಶಿಸ್ತು ಮತ್ತು ದಕ್ಷತೆಯನ್ನು ಮೂಡಿಸುವ ಬಗ್ಗೆ ವಿಶೇಷ ಮಾಹಿತಿಗಳನ್ನು ನೀಡುವುದಕ್ಕಾಗಿ ಏರ್ಪಡಿಸಲಾಗಿದೆ ಎಂದು ತಿಳಿಸಿದರು.



ತರಬೇತಿಯಲ್ಲಿ ಭಾಗವಹಿಸಿದ ಸಂಯುಕ್ತ ಸಹಕಾರಿಯ ಸಿಬ್ಬಂದಿಗಳು

ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಶ್ರೀ ಜಿ.ಎಸ್.ಮಹಾಬಲ, ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಶ್ರೀ ಯಡಗೆರೆ ಸುಬ್ರಹ್ಮಣ್ಯ, ಅಧ್ಯಕ್ಷರು, ಯಡಗೆರೆ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಕೊಪ್ಪ ಮತ್ತು ಶ್ರೀ ಧರ್ಮಪ್ಪ, ಅಧ್ಯಕ್ಷರು, ಸಹಕಾರ ಸಾರಿಗೆ, ಕೊಪ್ಪ, ಶ್ರೀ ಎಸ್.ಎನ್.ವಿಶ್ವನಾಥ, ಮಾಜಿ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಶ್ರೀ ಸಂಜಯ ಕೋರಟಕರ, ವಿಭಾಗೀಯ ಅಧಿಕಾರಿ, ಕಲಬುರಗಿ ವಿಭಾಗ ಇವರು ವಂದನಾರ್ಪಣೆ ಸಲ್ಲಿಸಿದರು.

ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ವಿ.ಎಸ್.ಹೆಗಡೆ, ವಕೀಲರು, ಬೆಂಗಳೂರು ಇವರು ರಾಷ್ಟ್ರೀಯ ಸುರಕ್ಷತೆ ಹಾಗೂ ಸಾಮಾಜಿಕ ಜವಾಬ್ದಾರಿ ಮತ್ತು ರಾಷ್ಟ್ರೀಯ ಸುರಕ್ಷತೆಯಲ್ಲಿ ಸಹಕಾರಿಗಳ ಪಾತ್ರವೇನೆಂಬುದನ್ನು ತಿಳಿಸಿದರು ಮತ್ತು ಶ್ರೀ ವೈ.ವಿ.ಗುಂಡೂರಾವ್, ನಬಾರ್ಡ್‌ನ ಸಹ ಪ್ರಧಾನ ವ್ಯವಸ್ಥಾಪಕರು (ನಿ), ಬೆಂಗಳೂರು ಇವರು ವೃತ್ತಿ ಸಂಸ್ಕೃತಿ ಮತ್ತು ಆಂತರಿಕ ಸಂಬಂಧಗಳ ನಿರ್ವಹಣೆ ವಿಷಯದ ಬಗ್ಗೆ ಉಪನ್ಯಾಸ ನೀಡಿದರು.

ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಸಿಬ್ಬಂದಿಯವರೊಡನೆ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳನ್ನು ಚುರುಕುಗೊಳಿಸುವ ನಿಟ್ಟಿನಲ್ಲಿ ಅನೇಕ ವಿಷಯಗಳ ಬಗ್ಗೆ ಚರ್ಚೆ ನಡೆಸಿದರು. ಅನೌಪಚಾರಿಕ ಸಮಯದಲ್ಲಿ ಶ್ರೀ ಪಾಂಡುರಂಗ ಅವರು ಟೀಮ್ ಬಿಲ್ಡಿಂಗ್ ಆಟಗಳನ್ನು ಆಡಿಸಿದರು.

ಎರಡನೇ ದಿನ ಸಂಯುಕ್ತ ಸಹಕಾರಿಯ ನಿರ್ದೇಶಕರು ಹಾಗೂ ಹಾಲಿ ಕ್ಯಾಂಪ್ಕೋ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್ಚಂದ್ರರವರು ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿ, ದೇಶದ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಕಳೆದ ಕೆಲವು ದಿನಗಳಿಂದ ಆಗಿರುವ ಬೆಳವಣಿಗೆಗಳನ್ನು ಅಧ್ಯಯನ ಮಾಡುವುದರ ಜೊತೆಗೆ ಎಲ್ಲಾ ವಿಷಯಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಸಂಯುಕ್ತ ಸಹಕಾರಿಯ ಸಿಬ್ಬಂದಿಯವರು ಹೊಂದಿರುವುದು ಅಗತ್ಯ. ಪ್ರತಿ ದಿನ ನಿಮ್ಮನ್ನು ನೀವು ಅಪ್‌ಡೇಟ್ ಮಾಡಿಕೊಳ್ಳಬೇಕು ಎಂದು ತಿಳಿಸಿದರು. ತರಬೇತಿಯ ಅಂಗವಾಗಿ "ಸಹಕಾರ ಸಾರಿಗೆ, ಕೊಪ್ಪ" ಮತ್ತು "ಯಡಗೆರೆ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಕೊಪ್ಪ" ಸಹಕಾರಿ ಸಂಸ್ಥೆಗಳಿಗೆ ಭೇಟಿ ನೀಡಿ, ಕಾರ್ಯಚಟುವಟಿಕೆಗಳನ್ನು ಅಧ್ಯಯನ ಮಾಡಲಾಯಿತು.

## 31.03.2016ಕ್ಕೆ ಅಂತ್ಯಗೊಂಡಿರುವ ಆರ್ಥಿಕ ಪ್ರಗತಿಯ ವಿವರಗಳು

### ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಚಿತ್ರದುರ್ಗ (ಕೋಟಿಗಳಲ್ಲಿ)

| | | |
|---|---|---|
| ಸ್ವಂತ ಬಂಡವಾಳ | – | 22.43 |
| ಠೇವಣಿಗಳು | – | 62.56 |
| ಸಾಲ ಮತ್ತು ಮುಂಗಡಗಳು | – | 45.43 |
| ದುಡಿಯುವ ಬಂಡವಾಳ | – | 90.01 |
| ತೆರಿಗೆ ನಂತರ ವರಮಾನ | – | 2.35 |

### ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬಳ್ಳಾರಿ (ಕೋಟಿಗಳಲ್ಲಿ)

| | | |
|---|---|---|
| ಸ್ವಂತ ಬಂಡವಾಳ | – | 25.53 |
| ಠೇವಣಿಗಳು | – | 315 |
| ಮುಂಗಡಗಳು | – | 198 |
| ಒಟ್ಟು ವ್ಯವಹಾರ | – | 513 |
| ಲಾಭ (ತೆರಿಗೆ ನಂತರ) | – | 3.36 |

### ಶ್ರೀಭ್ರಮರಾಂಭ ಪತ್ತಿನ ಸೌಹಾರ್ದ ಸಹಕಾರಿನಿ., ಮಸ್ಕಿ (ಕೋಟಿಗಳಲ್ಲಿ)

| | | |
|---|---|---|
| ಸ್ವಂತ ಬಂಡವಾಳ | – | 2.13 |
| ಠೇವಣಿಗಳು | – | 114.98 |
| ಸಾಲಗಳು | – | 84.57 |
| ದುಡಿಯುವ ಬಂಡವಾಳ | – | 125.73 |
| ವ್ಯವಹಾರ | – | 199.56 |
| ಲಾಭ | – | 2.05 |

### ವಿಕಾಸ ಸೌಹಾರ್ದ ಕೋ-ಆಪರೇಟಿವ್ ಬ್ಯಾಂಕ್‌ಲಿ., ಹೊಸಪೇಟೆ

| | | |
|---|---|---|
| ಸ್ವಂತ ಬಂಡವಾಳ | – | 22.13 |
| ಒಟ್ಟು ವ್ಯವಹಾರ | – | 307 |
| ಠೇವಣಿ | – | 193.44 |
| ಸಾಲ | – | 114.19 |
| ಲಾಭ | – | 4.52 |
| ನಿವ್ವಳ ಲಾಭ (ತೆರಿಗೆ ನಂತರ) | – | 2.65 |

### ಶ್ರೀ ಚನ್ನಬಸವ ಸ್ವಾಮಿ ಪತ್ತಿನ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಗಂಗಾವತಿ (ಲಕ್ಷಗಳಲ್ಲಿ)

| | | |
|---|---|---|
| ಶೇರು ಬಂಡವಾಳ | – | 112.05 |
| ಠೇವಣಿಗಳು | – | 2301.62 |
| ದುಡಿಯುವ ಬಂಡವಾಳ | – | 3492.67 |
| ಸಾಲಗಳು ಮತ್ತು ಮುಂಗಡಗಳು | – | 1846.32 |
| ನಿವ್ವಳ ಲಾಭ | – | 89.45 |

### ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಂಗಳೂರು(ಲಕ್ಷಗಳಲ್ಲಿ)

| | | |
|---|---|---|
| ಶೇರು ಬಂಡವಾಳ | – | 662.24 |
| ಠೇವಣಿಗಳು | – | 12376.13 |
| ಸಾಲ ಮತ್ತು ಮುಂಗಡಗಳು | – | 8366.37 |
| ದುಡಿಯುವ ಬಂಡವಾಳ | – | 14339.23 |
| ಒಟ್ಟು ಲಾಭ | – | 220.93 |

### ಸಿದ್ಧಿವಿನಾಯಕ ಪತ್ತಿನ ಸೌಹಾರ್ದ ಸಹಕಾರಿ ನಿ., ಕಲಬುರಗಿ

| | | |
|---|---|---|
| ದುಡಿಯುವ ಬಂಡವಾಳ | – | 8369100 |
| ಠೇವಣಿಗಳು | – | 91182618 |
| ಮುಂಗಡಗಳು | – | 76396302 |
| ಲಾಭ | – | 5211712 |

### ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ.,

| | | |
|---|---|---|
| ಸ್ವಂತ ಬಂಡವಾಳ | – | 23,90,00,000 |
| ದುಡಿಯುವ ಬಂಡವಾಳ | – | 228,58,00,000 |
| ಠೇವಣಿ | – | 200,39,00,000 |
| ಸಾಲ | – | 94,32,00,000 |
| ಲಾಭ | – | 1,15,17,000 |

## ಸ್ವಾತಿ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ ಹೊಸಪೇಟೆಯಲ್ಲಿ ಕುಡಿಯುವ ತಂಪು ನೀರಿನ ಅರವಟ್ಟಿಗೆ



ಬಳ್ಳಾರಿ ಜಿಲ್ಲೆಯ ಹೊಸಪೇಟೆಯ ಸ್ವಾತಿ ಪತ್ತಿನ ಸಹಕಾರಿ ವತಿಯಿಂದ ಬೇಸಿಗೆ ಕಾಲದ ನಿಮಿತ್ತ, ಸಾರ್ವಜನಿಕರಿಗೆ ತಂಪಾದ ಶುದ್ಧ ಕುಡಿಯುವ ನೀರಿನ ಅರವಟ್ಟಿಗೆಯನ್ನು ಸಹಕಾರಿಗಳ ಉಪನಿಬಂಧಕರಾದ ಡಾ. ಜಿ. ಉಮೇಶ್‌ರವರು ಉದ್ಘಾಟಿಸಿ, ಇದೊಂದು ಅತ್ಯಂತ್ಯ ಉತ್ತಮ ಹಾಗೂ ಮಾದರಿ ಕಾರ್ಯ ಎಂದು ಶ್ಲಾಘಿಸಿದರು. ಸಹಕಾರಿ ಅಧ್ಯಕ್ಷರಾದ ಶ್ರೀ ಎಂ ನೀಲಕಂಠಯ್ಯರವರು ಅಧ್ಯಕ್ಷತೆ ವಹಿಸಿದ್ದರು. ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಲ್ ಎಸ್ ಆನಂದರವರು, ಪ್ರಗತಿ ಪತ್ತಿನ ಸೌಹಾರ್ದ ಸಹಕಾರಿ ಅಧಕ್ಷರಾದ ಶ್ರೀ ಕೆ.ವಿ. ಪತ್ತಾರ ಲೆಕ್ಕಪರಿಶೋಧಕರಾದ ಶ್ರೀ ದೊಡ್ಡ ಬಸಪ್ಪ ಹಾಗೂ ಶ್ರೀ ಕೆ. ನಾಗರಾಜ ಮುಂತಾದವರು ಉಪಸ್ಥಿತರಿದ್ದರು.

## ಸಿಂಧನೂರು ನಗರ ಸಭೆಯ ಅಧ್ಯಕ್ಷರಾಗಿ ಆಯ್ಕೆ



ಶ್ರೀಮತಿ ಮಂಜುಳಾ ಪಾಟೀಲ

ಸಂಯುಕ್ತ ಸಹಕಾರಿಯ ರಾಯಚೂರು ಜಿಲ್ಲಾ ನಿರ್ದೇಶಕರಾದ ಶ್ರೀಮತಿ ಮಂಜುಳಾ ಪಾಟೀಲರವರು ಸಿಂಧನೂರು ನಗರ ಸಭೆಯ ಅಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ. ಅವರಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ, ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಹಾಗೂ ಸಿಬ್ಬಂದಿ ವರ್ಗದವರ ಪರವಾಗಿ ಅಭಿನಂದನೆಗಳು.

## ಶ್ರೀ ಬಿ.ವೆಂಕಟೇಶ್ ಸಂಯುಕ್ತ ಸಹಕಾರಿಯ ಚುನಾವಣಾಧಿಕಾರಿಯಾಗಿ ನೇಮಕ



ಶ್ರೀ ಬಿ.ವೆಂಕಟೇಶ್, ಕರ್ನಾಟಕ ಆಡಳಿತ ಸೇವೆ, ವಿಶೇಷ ಭೂ ಸ್ವಾಧೀನ ಅಧಿಕಾರಿಗಳು, ಕೆಐಎಡಿಬಿ, ಬೆಂಗಳೂರು ಇವರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೂತನ ಆಡಳಿತ ಮಂಡಲಿ ಚುನಾವಣೆಯನ್ನು ನಡೆಸಿಕೊಡಲು ರಿಟರ್ನಿಂಗ್ ಅಧಿಕಾರಿಯಾಗಿ ನೇಮಕಗೊಂಡಿದ್ದಾರೆ.

## ಸಂಯುಕ್ತ ಸಹಕಾರಿಯ ಕೇಂದ್ರ ಹಾಗೂ ಮೈಸೂರು ವಿಭಾಗೀಯ ಕಛೇರಿಗೆ

### ಹಿರಿಯ ಸಹಕಾರಿ ತಜ್ಞ ಶ್ರೀ ಎಮ್.ಬಿ.ಪಾಟೀಲರವರ ಭೇಟಿ

### ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ, ಸಾಧನೆಗಳು ಶ್ಲಾಘನೀಯ



ಬೆಂಗಳೂರಿನ ಪ್ರಾಂತೀಯ ಸಹಕಾರಿ ಆಡಳಿತ ತರಬೇತಿ ಸಂಸ್ಥೆಯ ನಿವೃತ್ತ ಪ್ರಾಂತೀಯ ನಿರ್ದೇಶಕರಾದ ಹಿರಿಯ ಸಹಕಾರಿ ತಜ್ಞರಾದ ಶ್ರೀ ಎಮ್.ಬಿ.ಪಾಟೀಲ್‌ರವರು ದಿನಾಂಕ 09.03.2016ರಂದು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಭೇಟಿ ನೀಡಿ, ರಾಜ್ಯದಲ್ಲಿ ಸ್ವಾಯತ್ತ (ಲಿಬರಲ್) ಕಾಯ್ದೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರಿ ಸಂಸ್ಥೆಗಳು ಹಾಗೂ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಅಧ್ಯಯನ ಮಾಡಿ, ತಮ್ಮ ಸಂತಸವನ್ನು ವ್ಯಕ್ತಪಡಿಸಿದರು. ದಿನಾಂಕ 06.03.2016 ರಂದು ಶ್ರೀಯುತರು ಸಂಯುಕ್ತ ಸಹಕಾರಿಯ ಮೈಸೂರು ವಿಭಾಗೀಯ ಕಛೇರಿಗೂ ಭೇಟಿ ನೀಡಿದ್ದರು.

## ಮಾರ್ಚ್ 2016ರಲ್ಲಿ ಸಂಯುಕ್ತ ಸಹಕಾರಿಯ ಶಾಸನಬದ್ಧ ಕಾರ್ಯಚಟುವಟಿಕೆಗಳು

**ವಿಶೇಷಾಧಿಕಾರಿಗಳ ನೇಮಕ :** ವಿವಿಧ ಕಾರಣಗಳಿಗಾಗಿ ಮಾರ್ಚ್ 2016 ಮಾಹೆಯಲ್ಲಿ ಈ ಕೆಳಗಿನ ಸೌಹಾರ್ದ ಸಹಕಾರಿಗಳಿಗೆ ವಿಶೇಷಾಧಿಕಾರಿಗಳನ್ನು ನೇಮಕ ಮಾಡಲಾಗಿದೆ.

| ಕ್ರ.ಸಂ. | ಸಹಕಾರಿ | ವಿಶೇಷಾಧಿಕಾರಿಗಳು | ಕಾರಣಗಳು |
|---|---|---|---|
| 1 | ಶ್ರೀ ಸಾಯಿ ಸಮರ್ಥ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಬೆಂಗಳೂರು. | ಶ್ರೀ ಪಾಲ್‌ರಾಜ್ ಎ., ಕಿರಿಯ ಅಧಿಕಾರಿ, ಕೇಂದ್ರ ಕಛೇರಿ, ಬೆಂಗಳೂರು. | ಸಹಕಾರಿಯ ಆಡಳಿತ ಮಂಡಲಿಯ ಎಲ್ಲಾ ನಿರ್ದೇಶಕರು ರಾಜೀನಾಮೆ ನೀಡಿರುವುದರಿಂದ ಆಡಳಿತ ಮಂಡಲಿ ಅಸ್ತಿತ್ವದಲ್ಲಿಲ್ಲದೇ ಇರುವುದರಿಂದ ಸಾಂವಿಧಾನಿಕ ಬಿಕ್ಕಟ್ಟು ಉಂಟಾಗಿರುವ ಕಾರಣ. |
| 2 | ದಿ ಸುವರ್ಣ ಕರ್ನಾಟಕ ಪತ್ತಿನ ಸೌಹಾರ್ದ ಸಹಕಾರಿ ನಿ., ಬೆಂಗಳೂರು. | ಶ್ರೀ ರಘುನಂದನ ಕೆ., ಸಹ ಪ್ರಧಾನ ವ್ಯವಸ್ಥಾಪಕರು, ಕೇಂದ್ರ ಕಛೇರಿ, ಬೆಂಗಳೂರು. | ಸಹಕಾರಿಯ ಆಡಳಿತ ಮಂಡಲಿಯ ಸದಸ್ಯರ ಸಂಖ್ಯೆಯು ಕೋರಂಗೆ ಅಗತ್ಯ ಸಂಖ್ಯೆಗಿಂತ ಕಡಿಮೆ ಸಂಖ್ಯೆ ಹೊಂದಿರುವುದರಿಂದ ಸಾಂವಿಧಾನಿಕ ಬಿಕ್ಕಟ್ಟು ಉಂಟಾಗಿರುವ ಕಾರಣ. |

## ಸಂಯುಕ್ತ ಸಹಕಾರಿಯ ಮುಂಬರುವ ಕಾರ್ಯಕ್ರಮಗಳು

1. **ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ 2 ದಿನಗಳ ಆಡಳಿತ ಪರಿಣಿತಿ ತರಬೇತಿ ಶಿಬಿರ :** ದಿನಾಂಕ 20 & 21 ಏಪ್ರಿಲ್ 2016. ಸ್ಥಳ : ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ, ಬೆಂಗಳೂರು. ಪ್ರವೇಶ ಶುಲ್ಕ ತಲಾ ರೂ.1000/–. ಮೊದಲು ನೋಂದಣಿ ಮಾಡುವ 60 ಜನರಿಗೆ ಮಾತ್ರ ತರಬೇತಿಗೆ ಅವಕಾಶ.

2. **ಸೌಹಾರ್ದ ಸಹಕಾರಿಗಳ ಮಹಿಳಾ ನಿರ್ದೇಶಕರುಗಳಿಗಾಗಿ 2 ದಿನಗಳ ತರಬೇತಿ ಶಿಬಿರ :** ದಿನಾಂಕ 29 & 30 ಏಪ್ರಿಲ್ 2016. ಸ್ಥಳ : ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ, ಬೆಂಗಳೂರು. ಪ್ರವೇಶ ಶುಲ್ಕ ತಲಾ ರೂ.500/–. ಮೊದಲು ನೋಂದಣಿ ಮಾಡುವ 60 ಜನರಿಗೆ ಮಾತ್ರ ತರಬೇತಿಗೆ ಅವಕಾಶ. ಈ ಎರಡೂ ಕಾರ್ಯಕ್ರಮಗಳಲ್ಲಿ ಊಟ, ವಸತಿ, ಅಧ್ಯಯನ ಸಾಹಿತ್ಯ, ತಜ್ಞರಿಂದ ಉಪನ್ಯಾಸ ವ್ಯವಸ್ಥೆಗಳನ್ನು ಸಂಯುಕ್ತ ಸಹಕಾರಿಯಿಂದ ಮಾಡಲಾಗುವುದು. ಹೆಚ್ಚಿನ ವಿವರಗಳಿಗಾಗಿ ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸುವುದು.

3. **ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 15 ನೇ ತಂಡದ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಶಿಬಿರ ದಿನಾಂಕ 10.06.2016 ರಿಂದ 19.06.2016ರವರೆಗೆ :** ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ಪ್ರತಿ 6 ತಿಂಗಳಿಗೊಂದು ಬಾರಿ ಏರ್ಪಡಿಸುವ ವ್ಯಕ್ತಿತ್ವ ವಿಕಸನ ತರಬೇತಿ ಶಿಬಿರವನ್ನು ಬೆಂಗಳೂರಿನ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ ಇಲ್ಲಿ ದಿನಾಂಕ 10.06.2016 ರಿಂದ 19.06.2016ರವರೆಗೆ ಏರ್ಪಡಿಸಲಾಗುವುದು. ಪ್ರತಿ ಸಲದಂತೆ ಈ ಬಾರಿಯೂ ಶಿಬಿರಾರ್ಥಿಗಳಿಗೆ ಯೋಗ, ಸೌಹಾರ್ದ ಸಹಕಾರಿ ಕ್ಷೇತ್ರದ ಪೂರ್ಣ ಪರಿಚಯ, ಸಮಗ್ರ ವ್ಯಕ್ತಿತ್ವ ವಿಕಸನಕ್ಕೆ ಸಂಬಂಧಿಸಿದ ವಿಷಯಗಳು, ಪ್ರಾಯೋಗಿಕಗಳು ಮತ್ತು ಅಧ್ಯಯನ ಪ್ರವಾಸದ ವ್ಯವಸ್ಥೆ ಇರುತ್ತದೆ.
   ಪ್ರವೇಶ ಶುಲ್ಕ ತಲಾ ರೂ.5000/–. ಮೊದಲು ನೋಂದಣಿ ಮಾಡುವ 60 ಜನರಿಗೆ ಮಾತ್ರ ತರಬೇತಿಗೆ ಅವಕಾಶ. ಊಟ, ವಸತಿ, ಅಧ್ಯಯನ ಸಾಹಿತ್ಯ, ತಜ್ಞರಿಂದ ಉಪನ್ಯಾಸ ವ್ಯವಸ್ಥೆಗಳನ್ನು ಸಂಯುಕ್ತ ಸಹಕಾರಿಯಿಂದ ಮಾಡಲಾಗುವುದು. ಹೆಚ್ಚಿನ ವಿವರಗಳಿಗಾಗಿ ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸುವುದು.

## ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಗೆ ಚುನಾವಣೆ ನಡೆಯುವವರೆಗೂ ಪ್ರಸಕ್ತ ಆಡಳಿತ ಮಂಡಲಿ ಮುಂದುವರೆಯುವಂತೆ ಹೈಕೋರ್ಟ್ ಮಧ್ಯಂತರ ಆದೇಶ

ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ಅಧಿಕಾರಾವಧಿ ಮಾರ್ಚ್ 15, 2016ಕ್ಕೆ ಮುಕ್ತಾಯವಾಗಿದ್ದು, ಚುನಾವಣೆ ನಡೆಸಿ ಕೊಡುವಂತೆ ಚುನಾವಣಾ ಪ್ರಾಧಿಕಾರಕ್ಕೆ ಕೋರಲಾಗಿತ್ತು.

ಚುನಾವಣಾ ಪ್ರಾಧಿಕಾರವು ತಾನು ಪ್ರಕಟಿಸಿರುವ ಚುನಾವಣಾ ವೇಳಾಪಟ್ಟಿಯಂತೆ ಚುನಾವಣೆ ನಡೆಸುವುದಾಗಿ ತೀರ್ಮಾನಿಸಿದ್ದರ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯವರು ಸಂಯುಕ್ತ ಸಹಕಾರಿಯು ಚುನಾವಣಾ ಪ್ರಾಧಿಕಾರಕ್ಕೆ ವಿನಂತಿಸಿರುವಂತೆ, ನಿಗದಿತ ಅವಧಿಯಲ್ಲಿ ಚುನಾವಣೆಯನ್ನು ನಡೆಸದೇ ಇದ್ದುದರಿಂದ ಮಾರ್ಚ್ 15ರ ನಂತರ ಒಂದು ಶಾಸನಬದ್ಧ ಸಹಕಾರಿ ಸಂಸ್ಥೆಗೆ ಆಡಳಿತಾಧಿಕಾರಿ ನೇಮಕವಾಗಬಾರದು ಎಂಬ ಉದ್ದೇಶದಿಂದ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲಾಗಿತ್ತು.

ಪ್ರಕರಣವನ್ನು ಆಲಿಸಿದ ಹೈಕೋರ್ಟ್ ಏಕಸದಸ್ಯ ಪೀಠವು ದಿನಾಂಕ : 11–03–2016ರಂದು ಮಧ್ಯಂತರ ಆದೇಶ ನೀಡಿ, ಸಂಯುಕ್ತ ಸಹಕಾರಿಯ ಮುಂಬರುವ ಚುನಾವಣೆ ನಡೆದು ನೂತನ ಆಡಳಿತ ಮಂಡಲಿಯು ಅಸ್ತಿತ್ವಕ್ಕೆ ಬರುವವರೆಗೂ ಸಂಯುಕ್ತ ಸಹಕಾರಿಯ ಪ್ರಸಕ್ತ ಆಡಳಿತ ಮಂಡಲಿಯು ಅಧಿಕಾರದಲ್ಲಿ ಮುಂದುವರೆಯುತ್ತದೆ ಎಂದು ಆದೇಶ ನೀಡಿರುತ್ತದೆ. ಹೆಚ್ಚಿನ ಮಾಹಿತಿಗೆ ಸಂಯುಕ್ತ ಸಹಕಾರಿಯ ವೆಬ್ ಸೈಟ್ www.souharda.coop ಅನ್ನು ಸಂಪರ್ಕಿಸುವುದು.

## ಮಾಹಿತಿ ಹಕ್ಕು ಕಾಯ್ದೆ ಸಂಯುಕ್ತ ಸಹಕಾರಿಗೆ ಅನ್ವಯಿಸುವುದಿಲ್ಲ

ಕರ್ನಾಟಕ ಮಾಹಿತಿ ಆಯೋಗದ ಮೇಲ್ಮನವಿ ಪ್ರಾಧಿಕಾರದ ಆದೇಶದ ಸಂಖ್ಯೆ 3378/ಸಿಓಎಂ/2014ರಡಿಯಲ್ಲಿ ವಿಚಾರಣೆ ನಡೆಸಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಸಾರ್ವಜನಿಕ ಪ್ರಾಧಿಕಾರವಾಗಿರುವುದಿಲ್ಲ ಹಾಗೂ ಅದಕ್ಕೆ ಮಾಹಿತಿ ಹಕ್ಕು ಕಾಯ್ದೆ ಅನ್ವಯಿಸುವುದಿಲ್ಲ ಎಂದು ದಿನಾಂಕ 30.01.2016ರಂದು ತೀರ್ಪು ನೀಡಲಾಗಿದೆ.

# ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಆಯ್ಕೆ

### ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಪುತ್ತೂರು



ಶ್ರೀ ಎಸ್.ಆರ್. ಸತೀಶ್ಚಂದ್ರ
ಅಧ್ಯಕ್ಷರು



ಶ್ರೀ ವಿನಯಕುಮಾರ್ ಕಂದಡ್ಕ
ಉಪಾಧ್ಯಕ್ಷರು

### ಶಿವಶ್ರೀ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ತುಮಕೂರು



ಶ್ರೀ ಹೆಚ್.ಎಸ್.ಭಸ್ಮಾಂಗಿ ರುದ್ರಯ್ಯ
ಅಧ್ಯಕ್ಷರು



ಶ್ರೀ ಬಿ.ಎನ್.ಕರುಣಾಕರ್
ಉಪಾಧ್ಯಕ್ಷರು

### ವಂದೇಮಾತರಂ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಮೂಡುಬಿದಿರೆ



ಶ್ರೀ ಎಂ.ವಾಸುದೇವ ಭಟ್
ಅಧ್ಯಕ್ಷರು



ಶ್ರೀ ಕೆ.ಶ್ಯಾಮ್ ಹೆಗಡೆ
ಉಪಾಧ್ಯಕ್ಷರು

### ಕೃಷಿಕ್ ಸೌಹಾರ್ದ ಸಹಕಾರಿ ನಿ., ಸಾಗರ



ಶ್ರೀ ರಾಮಪ್ಪ ಯು ಹೆಚ್
ಅಧ್ಯಕ್ಷರು



ಶ್ರೀ ಗೌತಮ್ ಕೆ ಎಸ್
ಉಪಾಧ್ಯಕ್ಷರು

### ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಹೊಸದುರ್ಗ



ಶ್ರೀ ಹಂಜಿ ಶಿವಸ್ವಾಮಿ
ಅಧ್ಯಕ್ಷರು



ಶ್ರೀ ಡಿ.ಆದಿರಾಜಯ್ಯ
ಉಪಾಧ್ಯಕ್ಷರು

### ವಿಜಯ ಪತ್ತಿನ ಸೌಹಾರ್ದ ಸಹಕಾರಿ ನಿ., ಬೆಂಗಳೂರು



ಶ್ರೀ ಇರ್ಮಾಡಿ ಜಯಪ್ರಸಾದ್ ಶೆಟ್ಟಿ
ಅಧ್ಯಕ್ಷರು



ಶ್ರೀ ಕೆ.ಭಗವಾನ್‌ದಾಸ್ ರೈ
ಉಪಾಧ್ಯಕ್ಷರು

### ಬದಾಮಿ ವಿಕಾಸ ಪತ್ತಿನ ಸೌಹಾರ್ದ ಸಹಕಾರಿ ನಿ., ಬಾದಾಮಿ



ಶ್ರೀ ಎಸ್ ಎಸ್ ಹಲಕುರ್ಕಿ
ಅಧ್ಯಕ್ಷರು



ಶ್ರೀ ಎಸ್ ಎಮ್ ಹೊಸಮನಿ
ಉಪಾಧ್ಯಕ್ಷರು

### ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಂಗಳೂರು



ಶ್ರೀ ಸದಾಶಿವ ರೆಡ್ಡಿ
ಅಧ್ಯಕ್ಷರು



ಶ್ರೀ ಶಂಕರ ರೆಡ್ಡಿ
ಉಪಾಧ್ಯಕ್ಷರು

### ಕೃಷ್ಣಾ ಗ್ರಾಮೀಣ ರೈತ ಸಿರಿ ಸೌಹಾರ್ದ ಸಹಕಾರಿ ನಿ., ತೆಗ್ಗಿ



ಶ್ರೀ ಹನಮಂತ ಬಿಮಪ್ಪ ಸಿಂಗರೆಡ್ಡಿ, ಅಧ್ಯಕ್ಷರು



ಶ್ರೀ ಹಾಜಿಮಲಂಗ ಹಟಿಲಸಾಬ ಜಾಲಗಾರ, ಉಪಾಧ್ಯಕ್ಷರು

### ವಿಶ್ವಗುರು ಬಸವಣ್ಣ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಬೆಂಗಳೂರು.



ಶ್ರೀ ಎಂ.ಸಿ. ಪಾಲನೇತ್ರಪ್ಪ
ಅಧ್ಯಕ್ಷರು

(National Federation of Urban Cooperative Banks)

## ನ್ಯಾಫ್‌ಕ್ಯಾಬ್ ಅಧ್ಯಕ್ಷರಾಗಿ ಶ್ರೀ ಜ್ಯೋತೀಂದ್ರ ಭಾಯಿ ಮೆಹತ ಆಯ್ಕೆ



ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರಾಗಿ ಹಿರಿಯ ಸಹಕಾರಿ ಹಾಗೂ ರಾಷ್ಟ್ರೀಯ ಸಹಕಾರ ಭಾರತಿಯ ಅಧ್ಯಕ್ಷರೂ ಆಗಿರುವ ಶ್ರೀ ಜ್ಯೋತೀಂದ್ರ ಭಾಯಿ ಮೆಹತಾರವರು ಆಯ್ಕೆಯಾಗಿದ್ದಾರೆ.

# ಜಿಲ್ಲಾ/ ತಾಲ್ಲೂಕು ಪಂಚಾಯಿತಿಗಳಲ್ಲಿ ಸೌಹಾರ್ದ ಸಹಕಾರಿಗಳು



ಬಸವ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಬೈಲಹೊಂಗಲ ಸಹಕಾರಿಯ ಸದಸ್ಯರಾದ ಶ್ರೀಮತಿ ಮಂಗಲಾ ಶ್ರೀ ಮೆಟಗುಡ್ಡರವರು ಬೆಳಗಾವಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಪ್ರಪ್ರಥಮ ಮಹಿಳಾ ಅಧ್ಯಕ್ಷರಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ಸಹಕಾರಿಯ ಪರವಾಗಿ ಸನ್ಮಾನ.



ಶಿವಸಂಗಮ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಗದಗ ಸಹಕಾರಿಯ ಸದಸ್ಯರುಗಳು ಅಬ್ಬಿಗೇರಿ ಜಿಲ್ಲಾ ಪಂಚಾಯಿತಿಗೆ ಶ್ರೀಮತಿ ರೂಪಾ ಮಂಜುನಾಥ ಅಂಗಡಿ, ಯಲಿಶಿರುಂದ ಕ್ಷೇತ್ರದಿಂದ ಶ್ರೀಮತಿ ಸಾವಕ್ಕ ಶಿವಪ್ಪ ಸುಂಕದ, ಹರ್ತಿ ಕ್ಷೇತ್ರದಿಂದ ಶ್ರೀ ಶರಣಬಸವನಗೌಡ ಶಂಕರಗೌಡ ಪಾಟೀಲ್‌ರವರುಗಳು ಆಯ್ಕೆಯಾದ ಹಿನ್ನೆಲೆಯಲ್ಲಿ ಸಹಕಾರಿ ಪರವಾಗಿ ಸನ್ಮಾನ.

## ಉದ್ಘಾಟನಾ ಸಮಾರಂಭ



ಶ್ರೀ ಬನಶಂಕರಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ ಸಹಕಾರಿಯ ಉದ್ಘಾಟನಾ ಸಮಾರಂಭವು ಶ್ರೀ ಮ.ನಿ.ಪ್ರ.ಶ್ರೀ ಅಲ್ಲಮಪ್ರಭು ಮಹಾಸ್ವಾಮೀಜಿ (ಸಿದ್ಧ ಸಂಸ್ಥಾನ ಮಠ, ಚಿಂಚಣಿ) ಇವರ ಅಮೃತ ಹಸ್ತದಿಂದ ಜರುಗಿತು. ಕಾರ್ಯಕ್ರಮಕ್ಕೆ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಹಾಗೂ ಚಿಕ್ಕೋಡಿಯ ಗಣ್ಯ ವ್ಯಕ್ತಿಗಳು ಉಪಸ್ಥಿತರಿದ್ದರು.



ಸವದತ್ತಿಯಲ್ಲಿ ಸ್ನೇಹಿತ ಸೌಹಾರ್ದ ಸಹಕಾರಿ ನಿ., ಸಹಕಾರಿಯ ಉದ್ಘಾಟನೆ



ಶ್ರೀ ಸಿದ್ಧಾರೂಢ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಸಹಕಾರಿಯ ಉದ್ಘಾಟನೆ

## ಶ್ರೀಮತಿ ಕೃತಿ ಜನಾರ್ಧನರವರಿಗೆ ಹೃದಯಸ್ಪರ್ಶಿ ಬೀಳ್ಕೊಡುಗೆ



ಪ್ರಸ್ತುತ ಸಂಯುಕ್ತ ಸಹಕಾರಿಯ ಬೆಂಗಳೂರು ವಿಭಾಗೀಯ ಅಧಿಕಾರಿಯಾಗಿ, ಇದಕ್ಕೂ ಪೂರ್ವದಲ್ಲಿ ಇ-ಸ್ಟ್ಯಾಂಪಿಂಗ್ ವಿಭಾಗದ ಮುಖ್ಯಸ್ಥೆಯಾಗಿ, ಸಹಕಾರ ಅಭಿವೃದ್ಧಿ ಪ್ರತಿಷ್ಠಾನದ "ಸ್ಕಾಪ್-ಕೆ" ಎಮ್.ಬಿ.ಎ. ಕಾಲೇಜಿನ ಕಾರ್ಯಕ್ರಮ ಸಮನ್ವಯಾಧಿಕಾರಿಯಾಗಿ ಒಟ್ಟಾರೆ ಕಳೆದ 9 ವರ್ಷಗಳಿಂದ ಸೇವೆ ಸಲ್ಲಿಸಿದ ಶ್ರೀಮತಿ ಕೃತಿ ಜನಾರ್ಧನರವರಿಗೆ ಅವರ ಸ್ವ-ಇಚ್ಛೆಯ ಮೇರೆಗೆ ಕೆಲಸದಿಂದ ಬಿಡುಗಡೆ ಮಾಡಿ ಹೃದಯಸ್ಪರ್ಶಿ ಬೀಳ್ಕೊಡುಗೆ ನೀಡಲಾಯಿತು.

ಕಾರ್ಯಕ್ರಮದಲ್ಲಿ ಶ್ರೀ ರಘುನಂದನರವರು ಸ್ವಾಗತಿಸಿದರು. ಶ್ರೀಮತಿ ಕೃತಿಯವರು ಸೇವೆಯಲ್ಲಿರುವಾಗ ಅವರ ಶಿಸ್ತು, ಸಂಯಮ, ಸಮಯಪಾಲನೆ ಮತ್ತು ದಕ್ಷ ಕಾರ್ಯನಿರ್ವಹಣೆಗಳು ಉಳಿದೆಲ್ಲ ಸಿಬ್ಬಂದಿಯವರಿಗೆ ಮಾರ್ಗದರ್ಶನ ಹಾಗೂ ಅನುಕರಣೀಯ ಎಂದು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ತಿಳಿಸಿದರು. ಶ್ರೀ ಶ್ರೀಕಾಂತ, ಶ್ರೀಮತಿ ಶೋಭಾ, ಶ್ರೀಮತಿ ಕವಿತಾ, ಶ್ರೀ ಭವನರಾವ ಹಾಗೂ ಶ್ರೀ ಸುನಿಲ್ ಮುಂತಾದವರು ತಮ್ಮ ಅನಿಸಿಕೆಯನ್ನು ತಿಳಿಸಿದರು.

## ಸಂಯುಕ್ತ ಸಹಕಾರಿಯ ಬೆಂಗಳೂರು ವಿಭಾಗೀಯ ಅಧಿಕಾರಿಯಾಗಿ ಶ್ರೀ ಸೂರ್ಯಕಾಂತ್ ರ್‍ಯಾಕಲೆ



ಬೆಂಗಳೂರು ವಿಭಾಗದ ವಿಭಾಗೀಯ ಅಧಿಕಾರಿ ಶ್ರೀಮತಿ ಕೃತಿ ಜನಾರ್ಧನ್‌ರವರು ಸ್ವಯಂ ಬಿಡುಗಡೆ ಹೊಂದಿದ ಪ್ರಯುಕ್ತ ಅವರ ಸ್ಥಳದಲ್ಲಿ ಶ್ರೀ ಸೂರ್ಯಕಾಂತ್ ರ್‍ಯಾಕಲೆಯ ಇವರನ್ನು ಬೆಂಗಳೂರು ವಿಭಾಗೀಯ ಅಧಿಕಾರಿಯಾಗಿ ನಿಯೋಜಿಸಲಾಗಿದೆ.

## ಧಾರವಾಡದಲ್ಲಿ ವಿಪ್ರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ



ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ವಿಪ್ರ ಕ್ರೆಡಿಟ್ ಸೌಹಾರ್ದ ಸಹಕಾರಿಯ ಆಶ್ರಯದಲ್ಲಿ ದಿ : 22–03–2016 ರಂದು ಮಹಿಳಾ ಸ್ವ–ಸಹಾಯ ಸಂಘದ ಸದಸ್ಯರಿಗೆ ಸಾಲ ವಿತರಣೆ ಮಾಡಲಾಯಿತು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ರಾಷ್ಟ್ರ ಸೇವಿಕಾ ಸಮಿತಿ ಪ್ರಮುಖರಾದ ಶ್ರೀಮತಿ ವೇದಾ ಕುಲಕರ್ಣಿ ಅವರು ಮಹಿಳೆಯರಿಗೆ ಚೆಕ್ ವಿತರಣೆ ಮಾಡಿ ಮಾತನಾಡುತ್ತಾ ಈ ಸಾಲ ಪಡೆದಂತಹ ಮಹಿಳೆಯರು ತಾವು ಪಡೆದ ಹಣವನ್ನು ಅಗತ್ಯ ಉದ್ಯೋಗಗಳಲ್ಲಿ ತೊಡಗಿಸಿ, ಅದರ ಸೂಕ್ತ ಪ್ರತಿಫಲ ಪಡೆದು ಸಕಾಲದಲ್ಲಿ ಸಾಲ ಮರುಪಾವತಿ ಮಾಡುವಂತಾಗಲಿ ಎಂದು ಹಾರೈಸಿದರು. ವಿಪ್ರ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ವೆಂಕಟೇಶ ದೇಸಾಯಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

## ಉಡುಪಿ ಜಿಲ್ಲಾ ಸಹಕಾರಿಗಳಿಗೆ ತರಬೇತಿ ಕಾರ್ಯಾಗಾರ ತರಬೇತಿಯಿಂದ ಸಹಕಾರಿ ರಂಗದ ಅಭಿವೃದ್ಧಿ

ದಿನಾಂಕ : 12.03.2016ರಂದು ಉಡುಪಿ ಜಿಲ್ಲಾ ಸಹಕಾರಿಗಳಿಗೆ ತರಬೇತಿ ಕಾರ್ಯಾಗಾರವನ್ನು ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟ ನಿ., ಉಡುಪಿ ಮತ್ತು ಸಾಫ್ಟ್‌ಪ್ರೋ ಬಿಸಿನೆಸ್ ಸಲ್ಯೂಷನ್ಸ್, ಕೆ.ಎಂ ಮಾರ್ಗ, ಉಡುಪಿ ಇವರ ಜಂಟಿ ಆಶ್ರಯದಲ್ಲಿ ಉಡುಪಿಯ ಪ್ರತಿಷ್ಠಿತ ಹೊಟೇಲ್ ನೈವೇದ್ಯದ ಅನುಗ್ರಹ ಸಭಾಂಗಣದಲ್ಲಿ ಒಕ್ಕೂಟದ ಅಧ್ಯಕ್ಷರಾದ ಶ್ರೀ ಮಂಜುನಾಥ ಎಸ್. ಕೆ ಇವರ ಅಧ್ಯಕ್ಷತೆಯಲ್ಲಿ ನಡೆಯಿತು.

ಈ ಸಂದರ್ಭದಲ್ಲಿ ಶ್ರೀ ಸುದರ್ಶನ್, ಮಾಲೀಕರು, ಸಾಫ್ಟ್‌ಪ್ರೋ ಬಿಸಿನೆಸ್ ಸಲ್ಯೂಷನ್ಸ್, ಜಿಲ್ಲಾ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಬಿ ಮಧುಸೂಧನ ನಾಯಕ್‌ರವರು, ಶ್ರೀ ಭಾಸ್ಕರ ಕಾಮತ್,



ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ, ಬೆಂಗಳೂರು, ಶ್ರೀ ಮುಕುಂದ ನಾಯ್ಕ್ ಚೇರ್ಕಾಡಿ, ಅಧ್ಯಕ್ಷರು, ಲ್ಯಾಂಪ್ಸ್ ಸೊಸೈಟಿ, ಆದಿ ಉಡುಪಿ ಮತ್ತು ಜಿಲ್ಲಾ ಒಕ್ಕೂಟ ಸಿ.ಇ.ಓ. ಶ್ರೀ ಭುವನೇಶ್, ಶ್ರೀ ಮಟ್ಟಾರ್ ರತ್ನಾಕರ ಹೆಗ್ಡೆ ಮುಂತಾದವರು ಉಪಸ್ಥಿತರಿದ್ದರು.



## ಹಿರಿಯ ಸಹಕಾರಿ ಶ್ರೀ ಜಿನ್ನಪ್ಪ ಪಾರಿಸಾ ಚೌಗಲೆ ನಿಧನ

ಬೆಳಗಾವಿ ಜಿಲ್ಲೆಯ ಅಥಣಿ ತಾಲುಕಿನ, ಶಿರಗುಪ್ಪಿ ಗ್ರಾಮದ ಶ್ರೀ ಲಾಲ್ ಬಹದ್ದೂರ ಕ್ರೆಡಿಟ್ ಸೌಹಾರ್ದ ಸಹಕಾರಿ ಲಿ. ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರು, ಶ್ರೀ ದೂಧಗಂಗಾ ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಚಿಕ್ಕೋಡಿಯ ಮಾಜಿ ಅಧ್ಯಕ್ಷರೂ ಆದ ಶ್ರೀ ಜಿನ್ನಪ್ಪಾ ಪಾರೀಸಾ ಚೌಗಲೆ ಇವರು ನಿಧನರಾದರು. ಶಿರಗುಪ್ಪಿ ಗ್ರಾಮದಲ್ಲಿ ರೈತಾಪಿ ಕುಟುಂಬದಲ್ಲಿ ಜನಿಸಿದ ಇವರು, ಗ್ರಾಮದಲ್ಲಿ ಏತ ನೀರಾವರಿ ಯೋಜನೆಗಳು ಹಿರಿಯರ ಸಹಾಯದಿಂದ ರೂಪಿಸಿ ಬರಡ ಭೂಮಿಗೆ ನೀರಿನ ಮುಖಾಂತರ ಸಂಜೀವಿನಿ ತಂದು ಗ್ರಾಮದ ಅಭಿವೃದ್ಧಿಗೆ ಕಾರಣರಾದ ಮಹನೀಯರು.

ಏತ ನಿರಾವರಿ ಹಾಗೂ ಶಿಕ್ಷಣ ಸಂಸ್ಥೆಗಳನ್ನು ಹುಟ್ಟುಹಾಕಿದ ಶ್ರೀಯುತರು, ಗ್ರಾಮೀಣ ಭಾಗದಲ್ಲಿ 1990ರಲ್ಲಿ ಸ್ಥಾಪಿಸಿರುವ ಶ್ರೀ ಲಾಲ್ ಬಹದ್ದೂರ ಕ್ರೆಡಿಟ್ ಸೌಹಾರ್ದ ಸಹಕಾರಿ ಜನಸಾಮಾನ್ಯರ ಮತ್ತು ಆರ್ಥಿಕವಾಗಿ ಹಿಂದುಳಿದ ಸದಸ್ಯರ ಆರ್ಥಿಕ ಸಮಸ್ಯೆ ಬಗೆಹರಿಸಲು ಸಾಧ್ಯವಾಗಿದೆ. ಅವರ ಸೇವೆಯನ್ನು ಪರಿಗಣಿಸಿದ ಸರಕಾರ ಹಾಗೂ ಅನೇಕ ಸಂಘ ಸಂಸ್ಥೆಗಳು ಪ್ರಶಸ್ತಿ ನೀಡಿ ಸನ್ಮಾನಿಸಿವೆ. ಶ್ರೀಯುತರ ನಿಧನದಿಂದ ಸಹಕಾರ ಕ್ಷೇತ್ರ ಒಬ್ಬ ಧೀಮಂತ ಉತ್ತಮ ಸಹಕಾರಿ ನಾಯಕನ್ನು ಕಳೆದುಕೊಂಡಂತಾಗಿದೆ ಎಂದು ಶ್ರೀಯುತರ ಆತ್ಮಕ್ಕೆ ಶಾಂತಿ ಕೋರಿ ಮೌನಾಚರಣೆ ಮಾಡುವುದರ ಮೂಲಕ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ಸಂತಾಪ ಸೂಚಿಸಲಾಯಿತು.

# ಸಹಕಾರಿಗಳ ಬೆಳವಣಿಗೆಗೆ ಆಧುನಿಕ ವ್ಯವಹಾರ ನಿರ್ವಹಣೆ ಅಗತ್ಯತೆ

▸▸ **ವಿಜಯ್ ಬಿ.ಎಸ್.**, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಕಲಬುರಗಿ ವಿಭಾಗ.

ನಿರ್ವಹಣೆ ಎಂಬುದು ಎಲ್ಲಾ ಸಂಸ್ಥೆಗಳಿಗೂ ಅವಶ್ಯಕ. ಅವುಗಳು ದೊಡ್ಡ ಅಥವಾ ಸಣ್ಣ, ಲಾಭ ಸಂಪಾದಿಸುವ ಅಥವಾ ಸಂಪಾದಿಸದಿರುವ ಹಾಗೂ ಉತ್ಪಾದನಾ ಮತ್ತು ಸೇವಾ ಚಟುವಟಿಕೆಗಳಲ್ಲಿ ತೊಡಗಿರುವ ಸಂಸ್ಥೆಗಳಾಗಿರಬಹುದು. ನಿರ್ವಹಣೆಯಲ್ಲಿ ಒಂದಾದ ನಂತರ ಮತ್ತೊಂದರಂತೆ, ಪರಸ್ಪರ ಸಂಬಂಧವಿರುವ ಹಾಗೂ ಪರಸ್ಪರ ಅವಲಂಬಿತ ನಿರ್ವಹಣಾ ಕಾರ್ಯಗಳಿರುತ್ತವೆ. ಈ ಎಲ್ಲಾ ಕಾರ್ಯಗಳನ್ನು ಸಹಕಾರಿಯ ಮುಖ್ಯಕಾರ್ಯನಿರ್ವಾಹಕರು ಅಥವಾ ವ್ಯವಸ್ಥಾಪಕರು ನಿಯಂತ್ರಿಸುತ್ತಾರೆ. ನಿಯಂತ್ರಿಸುವಿಕೆಯು ಸಾಮಾನ್ಯವಾಗಿ ವ್ಯವಹಾರ ನಿರ್ವಹಣೆಯ ಕೆಲ ಅಂಶಗಳ ಆಧಾರದ ಮೇಲೆ ಸಂಘಟಿತವಾಗಿರುತ್ತದೆ. ಅಂತಹ ಅಂಶಗಳೆಂದರೆ;

ಯಾವುದೇ ಒಂದು ಸಹಕಾರಿಯ ಮುಖ್ಯಕಾರ್ಯ ನಿರ್ವಾಹಕನು ಮೊದಲು ಮಾಡಬೇಕಾದ ಕಾರ್ಯವೆಂದರೆ ಯೋಜಿಸುವಿಕೆ ಯಾಗಿರುತ್ತದೆ. ಯಾವುದೇ Schems ಅನ್ನು ಜಾರಿಗೆ ತರಬೇಕಾದರೂ ಕ್ರಮಬದ್ಧವಾದ ಯೋಜನೆ ಅತಿ ಮುಖ್ಯವಾಗಿರುತ್ತದೆ.




ಈ ಯೋಜಿಸುವಿಕೆಯು ನಿರ್ವಹಣೆಯ ಪ್ರಥಮ ಕಾರ್ಯವಾಗಿದೆ. ಇದು ಭವಿಷ್ಯದಲ್ಲಿ ನಿರ್ವಹಿಸಬೇಕಾದ ಕಾರ್ಯಗಳನ್ನು ಪೂರ್ವಭಾವಿಯಾಗಿ ನಿರ್ಧರಿಸುವ ಪ್ರಕ್ರಿಯೆಯಾಗಿದೆ. ಇದು ಸಮಸ್ಯೆಗಳ ಪರಿಹಾರಕ್ಕೆ ತೀರ್ಮಾನಗಳನ್ನು ತೆಗೆದುಕೊಳ್ಳುವ ಪ್ರಯತ್ನವಾಗಿರುತ್ತದೆ. ಯೋಜಿಸುವಿಕೆಯ ಕಾರ್ಯ ಮುಗಿದ ನಂತರ ಮುಖ್ಯ ಕಾರ್ಯನಿರ್ವಾಹಕನು ಮಾಡಬೇಕಾದ ಕಾರ್ಯವೆಂದರೆ ಸಂಘಟಿಸುವಿಕೆಯಾಗಿರುತ್ತದೆ. ಅಂದರೆ, ಸಹಕಾರಿಯ ಆರ್ಥಿಕ ಹಾಗೂ ಮಾನವ ಸಂಪನ್ಮೂಲಗಳನ್ನು ಒಗ್ಗೂಡಿಸುವ ಪ್ರಕ್ರಿಯೆಯೇ ಸಂಘಟಿಸುವಿಕೆಯಾಗಿದೆ. ಯೋಜನೆಗಳನ್ನು ಹಾಕಿಕೊಂಡಾಗ ಅದಕ್ಕೆ ಬೇಕಾದ ಹಣಕಾಸಿನ ಮೂಲಗಳನ್ನು ಕಂಡುಕೊಳ್ಳಬೇಕು.

ಯಾವುದೇ ಸಹಕಾರಿ ಉತ್ತಮವಾಗಿದೆ ಎಂದು ಹೇಳಬೇಕಾದರೆ, ಅದು ಗಳಿಸಿರುವ ಆದಾಯದ ಮೇಲೆಯೇ ಹೊರತು ಬೇರೆ ಇನ್ನಾವುದರಿಂದಲೂ ಅಲ್ಲ. ಹಾಗಾಗಿ ಅನಗತ್ಯ ವೆಚ್ಚಗಳನ್ನು ಕಡಿಮೆ ಮಾಡುವತ್ತ ಹಾಗೂ ಸುಗಮ ಹಣಕಾಸಿನ ಹರಿವನ್ನು ಕಂಡುಕೊಳ್ಳ ಬೇಕಾಗುವುದು ಮುಖ್ಯಕಾರ್ಯನಿರ್ವಾಹಕನ ಕರ್ತವ್ಯಗಳಲ್ಲಿ ಒಂದಾಗಿರುತ್ತದೆ. ಈ ಸಂಘಟನೆಯ ಕಾರ್ಯವನ್ನು ಸಮರ್ಪಕವಾಗಿ ಕಾರ್ಯ ರೂಪಕ್ಕೆ ತರಬೇಕಾದರೆ ಉತ್ತಮ ಗುಣಮಟ್ಟದ ಮಾನವ ಸಂಪನ್ಮೂಲ ಅಗತ್ಯವಾಗಿ ಬೇಕಾಗುತ್ತದೆ. ಇತ್ತೀಚಿಗೆ ಮುಂದುವರೆಯುತ್ತಿರುವ ತಾಂತ್ರಿಕತೆ, ವ್ಯವಹಾರ ಗಾತ್ರದ ಹೆಚ್ಚಳದಿಂದಾಗಿ ಸಿಬ್ಬಂದಿಗಳ ನೇಮಕಾತಿಯು ಪ್ರಾಮುಖ್ಯತೆಯನ್ನು ಹೆಚ್ಚಿಸಿದೆ. ಸರಿಯಾದ ವ್ಯಕ್ತಿಗೆ ಸರಿಯಾದ ಕೆಲಸವನ್ನು ನೀಡುವುದು ಅತಿ ಮುಖ್ಯ. ಯಾವುದೇ ಯೋಜನೆಗಳನ್ನು ಹಾಕಿಕೊಂಡರೂ ಅಂತಿಮವಾಗಿ ಅದನ್ನು ನಿರ್ವಹಿಸುವವರು ಅಥವಾ ಕಾರ್ಯರೂಪಕ್ಕೆ ತರುವವರು ಸಿಬ್ಬಂದಿಗಳೇ ಆಗಿರುತ್ತಾರೆ.

ನೇಮಕಗೊಂಡ ಸಿಬ್ಬಂದಿಗಳಿಗೆ ಸಂಘಟನೆಯ ಉದ್ದೇಶಗಳನ್ನು ದಕ್ಷತೆಯಿಂದ ಹಾಗೂ ಪ್ರಾಮಾಣಿಕತೆಯಿಂದ ಸಾಧಿಸಲು ಯೋಜನೆಯ ಕಾರ್ಯವಿಧಾನಗಳನ್ನು ತಿಳಿಸಬೇಕಾದದ್ದು ಸಹಕಾರಿಯ ಮುಖ್ಯಕಾರ್ಯನಿರ್ವಾಹಕನ ಆದ್ಯ ಕರ್ತವ್ಯಗಳಲ್ಲೊಂದು ಹಾಗೂ ಸಿಬ್ಬಂದಿ ವರ್ಗಕ್ಕೆ ಮಾರ್ಗದರ್ಶನ, ಮೇಲ್ವಿಚಾರಣೆ, ಪ್ರೇರಣೆಯ ಮೂಲಕ ಯೋಜನೆಯ ಗುರಿ ಸಾಧಿಸಬೇಕು.

ಈ ಎಲ್ಲಾ ಕಾರ್ಯಗಳನ್ನು ಮಾಡಬೇಕಾದರೆ ಅಗತ್ಯ ನಿಯಂತ್ರಣ ಕ್ರಮಗಳನ್ನು ಅನುಸರಿಸಬೇಕಾಗುತ್ತದೆ. ಮೊದಲೇ ಸಿದ್ಧಪಡಿಸಿದ ಯೋಜನೆಯೊಂದಿಗೆ ಹಾಗೂ ಸದ್ಯ ಸಾಧಿಸಿರುವ ಹಾಗೂ ಮುಂದೆ ಸಾಧಿಸಲಿರುವ ಗುರಿಯೊಂದಿಗೆ ಮಾಪನವನ್ನು ಮಾಡಬೇಕಾಗುತ್ತದೆ. ಒಂದುವೇಳೆ ನಿಗದಿತ ಗುರಿಯನ್ನು ಸಾಧಿಸದಿದ್ದರೆ ಎಲ್ಲಿ ನಾವು ಆ ಗುರಿಯನ್ನು ತಲುಪಲು ಎಡವಿದ್ದೇವೆ? ಎಂಬುದರ ಬಗ್ಗೆ ಪುನರ್ ಅವಲೋಕಿಸುವುದೇ ಆಗಿರುತ್ತದೆ. ಒಂದು ಉತ್ತಮ ನಿಯಂತ್ರಣ ಪದ್ಧತಿಯು ಭವಿಷ್ಯದಲ್ಲಿ ಸಂಭವಿಸಬಹುದಾದ ನಷ್ಟವನ್ನು ಅದು ಸಂಭವಿಸುವ ಪೂರ್ವದಲ್ಲೇ ಅದನ್ನು ಗುರುತಿಸಿ, ಪರಿಹಾರವನ್ನು ಕಂಡುಕೊಳ್ಳಬೇಕಾಗುತ್ತದೆ. “YOUR MOST unhappy CUSTOMERS ARE YOUR greatest sources OF LEARNING” ಅಂದರೆ ನಿಮ್ಮ ಸೇವೆಯಿಂದ ತೃಪ್ತನಾಗದ ಗ್ರಾಹಕನಿಂದ ನೀವು ಕಲಿಬೇಕಾದದ್ದು ಸಾಕಷ್ಟಿರುತ್ತದೆ. ಆ ಸದಸ್ಯನಿಗೆ ಅಥವಾ ಗ್ರಾಹಕನಿಗೆ ಅವನ ಅಗತ್ಯತೆಗಳನ್ನು ಪೂರೈಸಲು ನೀವು ಎಡವಿದ್ದರೆ ಎಲ್ಲಿ ನಾವು ಎಡವಿದ್ದೇವೆ ಎನ್ನುವುದನ್ನು ಮೊದಲು ಗುರುತಿಸಿಕೊಂಡರೆ ಅದೇ ತಪ್ಪನ್ನು ಮತ್ತೊಬ್ಬ ಸದಸ್ಯನಿಗೆ ನೀವು ಖಂಡಿತ ಮಾಡಲಾರಿರಿ. ಆದ್ದರಿಂದ, ಯಾವುದೇ ವ್ಯವಹಾರವೇ ಆಗಲಿ ಅದನ್ನು ಒಂದು ಕ್ರಮಬದ್ಧವಾದ ಯೋಜನೆಯ ಮೂಲಕ ಕಾರ್ಯಗತಗೊಳಿಸಬೇಕಾದದ್ದು ಪ್ರತಿಯೊಂದು ಸಹಕಾರಿಯ ಜವಾಬ್ದಾರಿ ಹಾಗೂ ಅನಿವಾರ್ಯವಲ್ಲವೇ...?



ಹಳೆತನದ ಪರೆಯ ಬಿಟ್ಟು, ಹೊಸತನದ ಉಡುಗೆ ತೊಟ್ಟು,
ತಿಂದ ಕಹಿಯ ಮರೆತು, ಉಂಡ ಸಿಹಿಯ ನೆನೆದು ಹೊಸವರ್ಷಕ್ಕೆ
ಕಾಲಿಡೋಣ ಎಲ್ಲ ಸಹೋದರಿ, ಸಹೋದರರಿಗೂ

# ಯುಗಾದಿ ಹಬ್ಬದ ಶುಭಾಷಯಗಳು

ಶ್ರೀಮತಿ ಸವಿತ ಎನ್.ಇ., ಬೆಂಗಳೂರು

ಚೈತ್ರ ಮಾಸದ ಮೊದಲ ದಿನವೇ ನಮ್ಮ ಹೊಸ ವರುಷದ ಆಚರಣೆ. ಭಾರತದ ಅನೇಕ ಕಡೆಗಳಲ್ಲಿ ಈ ದಿನ ಹೊಸ ವರ್ಷದ ಮೊದಲ ದಿನವಾಗಿ ಹಾಗೂ ಹೊಸ ವರ್ಷದ ಹಬ್ಬವಾಗಿ ಯುಗಾದಿಯನ್ನು ಆಚರಿಸುತ್ತೇವೆ. ಏಕೆಂದರೆ "ಚೈತ್ರೆ ಮಾಸಿ ಜಗದ್ ಬ್ರಹ್ಮಾಸಸರ್ಜ ಪ್ರಥಮೇ$ ಹನಿ" ಅಂದರೆ ಬ್ರಹ್ಮದೇವನು ಚೈತ್ರಮಾಸದ ಮೊದಲನೆಯ ದಿನದಂದೇ ಜಗತ್ತನ್ನು ಸೃಷ್ಟಿ ಮಾಡಿದ್ದಾನೆ. ಅಂದಿನಿಂದ ಉಗಾದಿ ಅಥವಾ ಉಗಾದಿ "ಯುಗಾದಿ ಪದದ ಉಗಮ "ಯುಗ + ಆದಿ" ಹೊಸಯುಗದ ವರುಷದ ಆರಂಭವಾಗಿದೆ. ಇಂತಹ ಸಾಂಪ್ರದಾಯಿಕ ಹಬ್ಬವನ್ನು ಭಾರತದಲ್ಲಿ ತನ್ನದೇ ಆದ ಒಂದು ಅತ್ಯುನ್ನತವಾದ ಸಾಂಸ್ಕೃತಿಕ ಮಹತ್ವವನ್ನು ಪಡೆದಿದೆ. ಆದ್ದರಿಂದ, ಭಾರತೀಯರು ಅದರಲ್ಲೂ ಕರ್ನಾಟಕದವರು ತಮ್ಮ ಹೊಸ ವರುಷವನ್ನು ಯುಗಾದಿಯ ದಿನದಿಂದಲೇ ಆರಂಭ ಮಾಡುತ್ತಾರೆ. ಯುಗಾದಿಯ ಹಬ್ಬದಂದು ಸೂರ್ಯ ನಮಸ್ಕಾರ, ಪಂಚಾಗ ಪೂಜೆ, ಬೇವು-ಬೆಲ್ಲ ಸೇವನೆ ಹಾಗೂ ಹಂಚಿಕೆ ಈ ರೀತಿಯಾಗಿ ಆಚರಣೆಯೊಂದಿಗೆ ಆರಂಭಿಸಲಾಗುತ್ತದೆ. ಭಾರತದಲ್ಲಿ ಯುಗಾದಿಯೆಂದರೆ ಹೊಸ ವರ್ಷದ ಆರಂಭ.

**ಕವಿ ದ.ರಾ ಬೇಂದ್ರೆಯವರು ಕವಿ ವಾಣಿಯಲ್ಲಿ.....**

**"ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ,**
**ಹೊಸ ವರುಷಕೆ ಹೊಸ ಹರುಷವ**
**ಹೊಸತು ಹೊಸತು ತರುತಿದೆ"**

ಎಂಬ ನಿತ್ಯ ಸತ್ಯವನ್ನು ಮೆಲಕುಹಾಕುವ ಸಂತೋಷದ ಸಂಭ್ರಮದ ಸಡಗರದ ದಿನ ಈ ಯುಗಾದಿ.

ಮುಖ್ಯವಾಗಿ ಚಂದ್ರಮಾನ ಹಾಗೂ ಸೌರಮಾನ ಎಂದು ಎರಡು ಬಗೆಯಾಗಿ ಜ್ಯೋತಿಷ್ಯ ಶಾಸ್ತ್ರದಲ್ಲಿ ತಿಳಿಸಿದಂತೆ ಚಂದ್ರನ ಚಲನೆಯನ್ನಾಧರಿಸಿ ದಿನಗಣನೆ ಮಾಡುವುದನ್ನು ಚಂದ್ರಮಾನ ಎಂದು, ಸೂರ್ಯನ ಗತಿಯಿಂದ ಎಣಿಕೆ ಮಾಡುವುದನ್ನು ಹಾಗೂ ಅಶ್ವಿನಿ ನಕ್ಷತ್ರಕ್ಕೆ ಸೂರ್ಯನು ಪ್ರವೇಶಿಸುವ ಕಾಲವನ್ನು ಹೊಸವರ್ಷ – ಸೌರಮಾನ ಎಂದು ಕರೆಯಲಾಗುತ್ತಿದೆ.

ಕರ್ನಾಟಕದಲ್ಲಿ ಚಂದ್ರಮಾನ ಪದ್ಧತಿ ಮೊದಲಿನಿಂದಲೂ ರೂಢಿಯಲ್ಲಿದೆ. ಚಂದ್ರನ ಗತಿ ವೇಗವಾದ್ದರಿಂದ ಪ್ರತಿ ಪ್ರದಕ್ಷಿಣೆಗೂ ಒಂದು ಮಾಸದಂತೆ 12 ಪ್ರದಕ್ಷಿಣೆಗಳಿಗೆ ಸರಿಯಾಗಿ ಚಂದ್ರಮಾನ ಸಂವತ್ಸರ. ಸೂರ್ಯ ಚಂದ್ರರ ಗತಿ (ಚಲನೆಯನ್ನು) ಅವಲಂಬಿಸಿ 11 ರಿಂದ 12 ಪೂರ್ಣಿಮೆ/ ಅಮಾವಾಸ್ಯೆಗಳಿಗೊಂದು ಚಂದ್ರಮಾನ ಯುಗಾದಿಯಾಗುತ್ತದೆ. ನಮ್ಮ ಪೂರ್ವಿಕರ ಖಗೋಲಶಾಸ್ತ್ರ ಗಣಿತದ ಅಪಾರ ಜ್ಞಾನ ಇಂದಿನ ವಿಜ್ಞಾನಿಗಳಿಗೆ ನಿರಂತರ ಅನ್ವೇಷಣೆಯ ಕೆಲಸ.

**ನಿಂಬಪತ್ರ ಭಕ್ಷಣಂ**
**ಶತಾಯುವರ್ಜದೇಹಾಯ ಸರ್ವಸಂಶಪತ್ಕರಾಯ ಚ ।**
**ಸರ್ವಾರಿಷ್ಟ ವಿನಾಶಾಯ ನಿಂಬಕಂದಲಭಕ್ಷಣಂ ॥**

ಬೇವು ಬೆಲ್ಲ ಜೀವನದ ಸಿಹಿ-ಕಹಿಗಳೆರಡನ್ನೂ ಪಡೆಯ ಬೇಕೆಂದು ನೆನಪಿಸಲು ಹಾಗೂ ನೂರು ವರ್ಷಗಳ ದೀರ್ಘಾಯುಷ್ಯ ಪಡೆಯಲು, ವಜ್ರದಷ್ಟು ಗಟ್ಟಿಯುಳ್ಳ ದೇಹವನ್ನು ಪಡೆಯಲು ಎಲ್ಲಾ ರೀತಿಯ ಸಂಪತ್ತು ಮತ್ತು ಎಲ್ಲ ಅರಿಷ್ಟಗಳ ನಾಶಗಳಗಾಗಿ ಬೇವು ಮತ್ತು ಬೆಲ್ಲವನ್ನು ಸೇವನೆ ಮಾಡುವುದು ಈ ಹಬ್ಬದ ಸಂಪ್ರದಾಯ ಹಾಗೂ ನಾವು ಆಚರಣೆ ಮಾಡುತ್ತಿದ್ದೇವೆ.

ಮನೆಯ ಮುಂದೆ ಬಣ್ಣ ಬಣ್ಣದ ರಂಗೋಲಿಗಳನ್ನು ಹಾಕುವುದು, ಅಭ್ಯಂಜನ ಮಾಡಿ, ಪುಣ್ಯಾಹ ಮಂತ್ರಗಳನ್ನು ಹೇಳುವುದು, ಮಾವಿನ ಎಲೆಯ ಕಳಶ ತುಂಬಿ, ಅದರ ನೀರನ್ನು ಮಾವಿನ ಎಲೆಯಿಂದ ಮನೆಯ ಎಲ್ಲ ಕಡೆ ನೀರನ್ನು ಸಿಂಪಡಿಸುವುದು, ನಂತರ ಹೊಸ ಬಟ್ಟೆಗಳನ್ನು ಧರಿಸಿ, ಪಂಚಾಗವನ್ನು ಮನೆಯ ಹಿರಿಯರು ಓದುವುದು ಮತ್ತು ಅದನ್ನು ಮನೆಯ ಎಲ್ಲ ಸದಸ್ಯರುಗಳು ಕೇಳುವುದು, ತಳಿರು ತೋರಣಗಳನ್ನು ಮನೆಯ ಬಾಗಿಲುಗಳಿಗೆ ಹಾಗೂ ದೇವರ ಮನೆ ಬಾಗಿಲಿಗೆ ಕಟ್ಟುವುದು, ಒಬ್ಬಟ್ಟು/ ಹೋಳಿಗೆ ಇತರೆ ಅಡಿಗೆ

ಮಾಡುವುದು, ಸಂಜೆ ಚಂದ್ರ ದರ್ಶನ ಮಾಡಿ ಹಿರಿಯರ ಕಾಲಿಗೆ ನಮಸ್ಕರಿಸಿ, ಅವರಿಂದ ಹಳೆಯ ಕಹಿ ನೆನಪುಗಳೆಲ್ಲ ಹಾಗೇ ಕರಗಿ ಹೋಗಲಿ, ಹೊಸಕನಸುಗಳ ಕೈ ಹಿಡಿದು ಈ ಬದುಕು ನಡೆಸಲಿ, ಹೊಸ ವರುಷ ನಿಮ್ಮ ಬದುಕಿನಲ್ಲಿ ಹೊಸ ಕನಸು, ಹೊಸ ಹರುಷ, ಹೊಸ ನಗು ತರಲಿ ಎಂದು ಆರ್ಶೀವಾದ ಪಡೆಯುವುದು.

ಈ ಸಮಯದಲ್ಲಿ ಪ್ರಕೃತಿ ಮಾತೆಗೆ ಬಣ್ಣ ಬಣ್ಣದ ಹೂವು-ಚಿಗುರುಗಳ ಸೀರೆಯ ಅಲಂಕಾರ ಮಾಡಿದಂತೆ ಕಾಣುವುದು. ಘಮ ಘಮಿಸುತ್ತಿದೆ ಈ ಯುಗಾದಿಯಂದು, ಈ ಹೂವುಗಳ ರಾಶಿಯ ಮಿಲನವಿಂದು, ನವ ವರುಷದ ಹೊಸ ಹರುಷದಲಿ, ಚಿಗುರಲಿ ಸಂತೋಷದ ಪರಿಮಳವೆಂದೆಂದು ವಸಂತ ಋತುವಿನ ಚೆಲುವು, ಮೋಹಕತೆಗೆ ಆನಂದ, ಅಲ್ಲದೇ, ಬಿಸಿಲ ಬೇಗೆಯ ನಿವಾರಣೆಗೆ ಹೊಂಗೆಯ ನೆರಳು, ತುಂಗೆಯ ಕಂಪು, ಮಾವು - ಬೇವುಗಳ ಗೊಂಚಲುಗಳ ತೂಗಾಟ, ಬಾಡಿದ ಮನಕ್ಕೆ ಸಂತೋಷ ನೀಡುತ್ತಿರುತ್ತವೆ. ಇವೆಲ್ಲ ಭಾರತೀಯ ಸಂಸ್ಕೃತಿಯಲ್ಲಿ ಯುಗಾದಿ ಹಬ್ಬಕ್ಕೆ ತನ್ನದೇ ಆದ ಮಹತ್ವವನ್ನು ಪಡಿದಿರುವುದು ನಮಗೆ ಹೆಮ್ಮೆಯ ವಿಷಯ. ಯುಗಾದಿ ಹಬ್ಬವನ್ನು ಹಳ್ಳಿಗಳಲ್ಲಿ ಸಂಬಂಧಗಳ ಬೆಸುಗೆ ಹಬ್ಬ ಎಂದು ಕರೆಯುತ್ತಾರೆ. ಯುಗಾದಿ ಹಬ್ಬವು ಪರಸ್ಪರ ಎಲ್ಲರಲ್ಲೂ ಪ್ರೀತಿಯನ್ನು ವೃದ್ಧಿಸುವಂತಹ ಆಚರಣೆಯಾಗಿದೆ.



ಕೆಲಸ-ಕಾರ್ಯದ ಅಥವಾ ಇನ್ನಾವುದೋ ಕಾರಣದಿಂದಲೋ ಹಬ್ಬ-ಹರಿದಿನಗಳಲ್ಲಿ ಒಂದೆಡೆ ಸೇರುವುದಕ್ಕೆ ಸಹಕಾರಿಯಾಗಿವೆ. ಅಲ್ಲದೇ ಎಲ್ಲರ ನಡುವೆಯೂ ಉತ್ತಮವಾದ ಆತ್ಮೀಯತೆ ಬೆಳೆಯಲು ಕೂಡ ಸಹಕಾರಿಯಾಗಿದೆ. ಕನ್ನಡದ ಶ್ರೇಷ್ಠ ಕವಿ, ವರಕವಿ ದ.ರಾ. ಬೇಂದ್ರೆಯವರು ಯುಗ ಯುಗಾದಿ ಕಳೆದರು.... ಗೀತೆಯನ್ನು ಸಾರುವ ಜೊತೆಗೆ ನಾನು ಬಡವ ಆಕೆ ಬಡವಿ ಒಲವೇ ನಮ್ಮ ಬದುಕು ಎಂಬ ಗೀತೆಯಲ್ಲೂ ಕೂಡ ಯುಗಾದಿ ಹಬ್ಬವೂ ಪ್ರೀತಿ, ವಿಶ್ವಾಸ, ಗೌರವ ಮನೋಭಾವನೆಯನ್ನು ಹೆಚ್ಚಿಸುತ್ತಿದೆ ಎಂದು ತಿಳಿಸಿದ್ದಾರೆ. ಜೀವನದಲ್ಲಿ ಸಿಹಿ-ಕಹಿ, ಸುಖ-ದುಃಖ, ಕತ್ತಲು-ಬೆಳಕು, ನೋವು-ನಲಿವು ಇವುಗಳ ಸಂಯೋಜನೆ ಇಲ್ಲದೇ ಜೀವನದ ಬಂಡಿ ಸಾಗುವುದಿಲ್ಲ, ಅದಕ್ಕಾಗಿ ಅದರ ಅನುಭವವಾಗಲ್ಲೆಂದೇ ಯುಗಾದಿ ಹಬ್ಬದಂದು ಬೇವು-ಬೆಲ್ಲ ಸ್ವೀಕರಿಸುವ ಆಚರಣೆಯು ಒಂದು ವಿಶಿಷ್ಟ ಪರಿಕಲ್ಪನೆ. ನಮ್ಮ ಜೀವನದಲ್ಲಿ ಇವೆರಡರ ಸಮಾನ ಇರುವಿಕೆ ಅಗತ್ಯವಿದೆ. ಇವು ಒಂದನ್ನೊಂದು ಬಿಟ್ಟಿರಲಾರವು. ಇವೆಲ್ಲದರ ತಾತ್ಪರ್ಯ ಇಷ್ಟೇ, ನಾವೆಲ್ಲ ಕೂಡಿ ಬಾಳಿದರೆ ಸ್ವರ್ಗ ಎಂಬುದನ್ನು ಈ ಹಬ್ಬ ನಮಗೆ ಸಾರುತ್ತಿದೆ.

ಯುಗಾದಿ ಹಬ್ಬವು ಎಲ್ಲರ ಬಾಳಲ್ಲಿ ಸಂಭ್ರಮ-ಸಡಗರ ನೀಡುವುದರ ಜೊತೆಗೆ ಅವರ ಮನದಲ್ಲಿ ಹೊಸ ಭರವಸೆ, ಆಶಯ, ಗುರಿ, ಉದ್ದೇಶ, ಬಯಕೆ, ಕನಸುಗಳನ್ನು ಚಿಗುರಿಸುತ್ತಾ ನವವರುಷಕ್ಕೆ ಆಶಾಕಿರಣವಾಗಿ ಮೂಡಿಬರಲಿ.

## ವಾರ್ಷಿಕ ಶುಲ್ಕ ಹಾಗೂ ಶಿಕ್ಷಣ ನಿಧಿ ಮತ್ತು ಅರ್ಹ ಮತದಾರರ ಪಟ್ಟಿ ಪ್ರಕಟಣೆ ಕುರಿತು ಮುಖ್ಯ ಕಾರ್ಯನಿರ್ವಾಹಕರ ಜವಾಬ್ದಾರಿ

1. **ವಾರ್ಷಿಕ ಶುಲ್ಕ ಹಾಗೂ ಶಿಕ್ಷಣ ನಿಧಿ :**

ಅ) ತಮ್ಮ ಸಹಕಾರಿಯ ವಾರ್ಷಿಕ ಶುಲ್ಕ ಹಾಗೂ ಸಹಕಾರ ಶಿಕ್ಷಣ ನಿಧಿಗಳನ್ನು ಪಾವತಿಸಲು ಕೋರಿಕೆ ಬಂದ ಕೂಡಲೇ ಪಾವತಿಸಲು ಸೂಕ್ತ ಗಮನ ನೀಡಲು ಕೋರಲಾಗಿದೆ.

ಆ) ನಿಗದಿತ ಸಮಯದಲ್ಲಿ ವಾರ್ಷಿಕ ಶುಲ್ಕ ಹಾಗೂ ಸಹಕಾರ ಶಿಕ್ಷಣ ನಿಧಿಗಳನ್ನು ಪಾವತಿಸಿ ಮುಂದಿನ ದಿನದಲ್ಲಿ ನಿಮ್ಮ ಸಹಕಾರಿಯು ವಿವಿಧ ಅನರ್ಹತೆ ಗೊಳಗಾಗುವುದನ್ನು ತಪ್ಪಿಸಿ.

2. **ವರ್ಷದ ಅರ್ಹ ಮತದಾರರ ಪಟ್ಟಿ ಪ್ರಕಟಿಸಿ :**

ಅ) ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ಕಲಂ 32 (1) (ಡಿ) ಅಡಿ ಪ್ರಸಕ್ತ ವರ್ಷದ ಅರ್ಹ ಮತದಾರರ ಪಟ್ಟಿಯನ್ನು ಪ್ರಕಟಿಸುವುದು ಮುಖ್ಯ ಕಾರ್ಯನಿರ್ವಾಹಕರ ಜವಾಬ್ದಾರಿಯಾಗಿರುತ್ತದೆ ಏಪ್ರಿಲ್ 30ರೊಳಗೆ ಅಂತಹ ಪಟ್ಟಿಯನ್ನು ಪ್ರಕಟಿಸಲು ಸೂಚಿಸಲಾಗಿದೆ.

ಆ) ಹಿಂದಿನ ಮೂರು ಸಾಮಾನ್ಯ ಸಭೆಗಳಲ್ಲಿ ಕನಿಷ್ಠ ಒಂದು ಸಾಮಾನ್ಯ ಸಭೆಗೆ ಹಾಜರಾಗದ ಹಾಗೂ ಉಪವಿಧಿಗಳಲ್ಲಿ ನಿಗದಿಪಡಿಸಿದ ಕನಿಷ್ಠ ವ್ಯವಹಾರವನ್ನು ಮಾಡದ ಸದಸ್ಯರನ್ನು ಆಯಾ ವರ್ಷವೇ ತೆಗೆದು ಹಾಕುವ ಕ್ರಮ ಕೈಗೊಳ್ಳಲೂ ಈ ಮೂಲಕ ಸೂಚಿಸಲಾಗಿದೆ.

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲು ನಿರ್ಧರಿಸಲಾಗಿದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ – ಸಂಪಾದಕರು

## ನಿಮ್ಮ ಪ್ರಶ್ನೆ



## ನಮ್ಮ ಉತ್ತರ

– ಶ್ರೀಕಾಂತ ಬರುವೆ
ಸಹ ಪ್ರಧಾನ ವ್ಯವಸ್ಥಾಪಕರು,
ಕ.ರಾ.ಸೌ.ಸಂ.ಸ.ನಿ.,

**ಶ್ರೀ ಚನ್ನಬಸವಸ್ವಾಮಿ ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕ್ ನಿ., ಗಂಗಾವತಿ.**

**ಪ್ರಶ್ನೆ 1 : ಕೆಲವು ಗ್ರಾಹಕರು ತಮ್ಮ ಮುದ್ದತು ಠೇವಣಿಗಳನ್ನು ನವೀಕರಿಸುತ್ತಾರೆ. ನವೀಕರಣದ ವೇಳೆ ರೂ.10,000/– ಮೀರಿ ಬಡ್ಡಿಯು ಮುದ್ದತು ಠೇವಣಿಗೆ ಜಮೆಯಾಗಿ ನವೀಕರಣವಾಗುತ್ತದೆ. ಅಂತಹ ಸಂದರ್ಭದಲ್ಲಿ ಟಿ.ಡಿ.ಎಸ್. ಕಡಿತಗೊಳಿಸಬೇಕೇ?**

**ಉತ್ತರ :** ಆದಾಯ ತೆರಿಗೆ ಅಧಿನಿಯಮ, 1961ರ ಕಲಂ 194 ಎ ರನ್ವಯ ಪಟ್ಟಣ ಸಹಕಾರ ಬ್ಯಾಂಕುಗಳು ನಿಶ್ಚಿತ ಠೇವಣಿಗಳಿಗೆ ಮತ್ತು ಆವರ್ತ ಠೇವಣಿಗಳಿಗೆ (Recurring Deposite) ರೂ. 10,000/– ಅದಕ್ಕೂ ಮೇಲ್ಪಟ್ಟು ಪಾವತಿಸುವ ಬಡ್ಡಿಗೆ ಟಿ.ಡಿ.ಎಸ್. ಕಡಿತಗೊಳಿಸುವುದು ಕಡ್ಡಾಯವಾಗಿರುತ್ತದೆ. ಅದರಂತೆ, ತಮ್ಮ ಪ್ರಕರಣದಲ್ಲಿ ಈಗಾಗಲೇ ಒಂದು ನಿಶ್ಚಿತ ಠೇವಣಿಗೆ ರೂ.10,000/– ಬಡ್ಡಿ ಆಕರಣೆಯಾಗಿರುವ ಕಾರಣ, ಸದರಿ ಮೊತ್ತಕ್ಕೆ ಟಿ.ಡಿ.ಎಸ್. ಕಡಿತಗೊಳಿಸುವುದು ಕಡ್ಡಾಯ ವಾಗಿರುತ್ತದೆ.

**ಚಿಕ್ಕೇರೂರ ಪತ್ತಿನ ಸೌಹಾರ್ದ ಸಹಕಾರಿ ನಿ., ಚಿಕ್ಕೇರೂರ.**

**ಪ್ರಶ್ನೆ 2 : ಸಹಕಾರಿಯಲ್ಲಿ ಹೆಚ್ಚಿನ ಉಳಿತಾಯ ಹಣವನ್ನು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನಲ್ಲಿ ಠೇವಣಿ ಇರಿಸಿದರೆ, (ಉಳಿತಾಯ ಖಾತೆ, ಮುದ್ದತಿ ಠೇವುವ ಕ್ಯಾಶ್ ಸರ್ಟಿಫಿಕೇಟ್ ಖಾತೆ) ಸದರಿ ಠೇವಣಿಗಳ ಮೇಲೆ ಬರುವ ಬಡ್ಡಿಗೆ ಆದಾಯ ತೆರಿಗೆಯಿಂದ ವಿನಾಯಿತಿ ಸಿಗಬಹುದೇ?**

**ಉತ್ತರ :** ಆದಾಯ ತೆರಿಗೆ ಅಧಿನಿಯಮ, 1961ರ ಕಲಂ 80 ಪಿ (2) (ಎ) (i)ರನ್ವಯ ಸಹಕಾರಿಯು ತನ್ನ ಸದಸ್ಯರೊಂದಿಗೆ ನಡೆಸಿರುವ ವ್ಯವಹಾರಕ್ಕೆ ಆದಾಯ ತೆರಿಗೆಯಿಂದ ಕಡಿತವನ್ನು (Deduction) ಹೊಂದಿರುತ್ತದೆ (ಸಾಮಾನ್ಯವಾಗಿ ಇದನ್ನೇ 'ವಿನಾಯಿತಿ' ಎಂದು ಕರೆಯುತ್ತಾರೆ). ಆದರೆ, ಸಹಕಾರಿಯು ವಾಣಿಜ್ಯ ಬ್ಯಾಂಕ್ ಅಥವಾ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಅಥವಾ ಇನ್ಯಾವುದೇ ಸಹಕಾರಿ ಬ್ಯಾಂಕಿನಲ್ಲಾಗಲೀ ಠೇವಣಿ ಇಟ್ಟಾಗ ಸದರಿ ಠೇವಣಿಗೆ ರೂ.10,000/–ಕ್ಕಿಂತ ಹೆಚ್ಚಿನ ಬಡ್ಡಿ ಆಕರಣೆಯಾಗುತ್ತಿದ್ದಲ್ಲಿ ಸದರಿ ಮೊತ್ತಕ್ಕೆ ಬ್ಯಾಂಕಿನವರು ಟಿ.ಡಿ.ಎಸ್. ಕಡಿತಗೊಳಿಸುತ್ತಾರೆ. ಆದಾಗ್ಯೂ, ಸಹಕಾರಿಯು ತನ್ನ ಆದಾಯ ತೆರಿಗೆ ರಿಟರ್ನ್ಸ್‌ನಲ್ಲಿ ಸಹಕಾರಿಯು ಗಳಿಸಿರುವ ರೂ.10,000/–ಕ್ಕಿಂತ ಹೆಚ್ಚಿನ ಮೊತ್ತವು ವ್ಯವಹಾರದಿಂದ ಗಳಿಸಿರುವ ಆದಾಯವಾಗಿರುತ್ತದೆಯೇ ಹೊರತು ಹೂಡಿಕೆಯ ಮೇಲಿನ ಆದಾಯವಲ್ಲ ಎಂಬುದನ್ನು ನಮೂದು ಮಾಡಿ (Income during the course of business, not an income from investment), ಟಿ.ಡಿ.ಎಸ್ ಮಾಡಿರುವ ಮೊತ್ತವನ್ನು ವಾಪಸು ಪಡೆದುಕೊಳ್ಳಬಹುದಾಗಿರುತ್ತದೆ. ಈ ಕುರಿತು ಇತ್ತೀಚೆಗೆ ಕರ್ನಾಟಕ ಉಚ್ಚ ನ್ಯಾಯಾಲಯವು ಐಟಿಎ ಸಂಖ್ಯೆ : 29/2015ರಲ್ಲಿ ತೀರ್ಪನ್ನು ನೀಡಿರುತ್ತದೆ.

**ಪ್ರಶ್ನೆ 3 : ಸಹಕಾರಿಯ ಆಪದ್ಧನ ಮತ್ತು ಇತರೆ ನಿಧಿಗಳನ್ನು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನಲ್ಲಿಡಲು ಕಾಯ್ದೆಯಲ್ಲಿ ತಿಳಿಸಿದ್ದು, ಇದರಲ್ಲಿರಿಸಿದ ಠೇವಣಿ ಮೇಲಿನ ಬಡ್ಡಿಗೆ ಆದಾಯ ತೆರಿಗೆಯಿಂದ ವಿನಾಯಿತಿ ದೊರೆಯಬಹುದೇ?**

**ಉತ್ತರ :** ಸಹಕಾರಿಯ ಮೀಸಲು ನಿಧಿ ಅಥವಾ ಆಪದ್ಧನವನ್ನು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನಲ್ಲಿ ಇಡುವುದು ಕಡ್ಡಾಯವಲ್ಲ. ಸಹಕಾರಿಯು ಮೀಸಲು ನಿಧಿಯನ್ನು ಯಾವುದೇ ರಾಷ್ಟ್ರೀಕೃತ ಅಥವಾ ವಾಣಿಜ್ಯ ಅಥವಾ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಅಥವಾ ಇನ್ನ್ಯಾವುದೇ ಸಹಕಾರಿ ಬ್ಯಾಂಕಿನಲ್ಲಾಗಲೀ ಠೇವಣಿ ಇಡಬಹುದಾಗಿರುತ್ತದೆ. ಆದರೆ, ಯಾವುದೇ ಬ್ಯಾಂಕಿನಲ್ಲಿ ಠೇವಣಿಯಿಟ್ಟಿದ್ದರೂ ಸಹ ಬ್ಯಾಂಕಿನವರು ಟಿ.ಡಿ.ಎಸ್. ಕಡಿತಗೊಳಿಸುತ್ತಾರೆ. ಆದಾಗ್ಯೂ, ಸಹಕಾರಿಯು ತನ್ನ ಆದಾಯ ತೆರಿಗೆ ರಿಟರ್ನ್ಸ್‌ನಲ್ಲಿ ಸಹಕಾರಿಯು ಗಳಿಸಿರುವ ರೂ. 10,000/–ಕ್ಕಿಂತ ಹೆಚ್ಚಿನ ಬಡ್ಡಿ ಮೊತ್ತವು ಕಾಯ್ದೆಯ ಮೂಲಕ ಕಡ್ಡಾಯವಾಗಿ ಹೂಡಿಕೆ ಮಾಡಬೇಕಾಗಿರುವ ಮೊತ್ತವಾಗಿರುವುದರಿಂದ ಈ ಮೊತ್ತದಿಂದ ಬಂದಿರುವ ಬಡ್ಡಿ ಆದಾಯವು ವ್ಯವಹಾರದಿಂದ ಗಳಿಸಿರುವ ಆದಾಯವಾಗಿರುತ್ತದೆಯೇ ಹೊರತು ಹೂಡಿಕೆಯ ಮೇಲಿನ ಆದಾಯವಲ್ಲ ಎಂಬುದನ್ನು ನಮೂದು ಮಾಡಿ (Income during the course of business, not an income from investment), ಟಿ.ಡಿ.ಎಸ್ ಮಾಡಿರುವ ಮೊತ್ತವನ್ನು ವಾಪಸು ಪಡೆದುಕೊಳ್ಳಬಹುದಾಗಿರುತ್ತದೆ. ಈ ಕುರಿತು ಇತ್ತೀಚೆಗೆ ಕರ್ನಾಟಕ ಉಚ್ಚ ನ್ಯಾಯಾಲಯವು ಐಟಿಎ ಸಂಖ್ಯೆ:29/2015ರಲ್ಲಿ ತೀರ್ಪನ್ನು ನೀಡಿರುತ್ತದೆ.

**ಪ್ರಶ್ನೆ 4 : ಈಗಿನ ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ, ಒಂದು ಸಹಕಾರಿಯು ಇನ್ನೊಂದು ಸಹಕಾರಿಯಲ್ಲಿ ಸದಸ್ಯತ್ವ ಪಡೆದು ವ್ಯವಹರಿಸಿದರೆ ತೆರಿಗೆ ವಿನಾಯಿತಿ ಇದೆ. ಆದರೆ, ನಮ್ಮ ಸಹಕಾರಿಯು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನಲ್ಲಿ ಸದಸ್ಯತ್ವ ಹೊಂದಿರುತ್ತದೆ. ಸದರಿ ಬ್ಯಾಂಕಿನಲ್ಲಿರಿಸಿದ ಠೇವಣಿ ಮೇಲಿನ ಬಡ್ಡಿಗೆ ಆದಾಯ ತೆರಿಗೆಯಿಂದ ವಿನಾಯಿತಿ ಸಿಗಬಹುದೇ?**

ಉತ್ತರ : ಮೇಲೆ ಉತ್ತರಿಸಲಾಗಿದೆ. ■

# ಆರ್ಥಿಕ ಮಾರುಕಟ್ಟೆ ವ್ಯವಸ್ಥೆಯಲ್ಲಿ ಸಹಕಾರಿ ಸಂಸ್ಥೆಗಳ ಸ್ಥಿರೀಕರಣ

## (Positioning of cooperatives in emerging market economy)

ಎಮ್.ಬಿ.ಪಾಟೀಲ

ನೂತನ ಆರ್ಥಿಕ ನೀತಿ ಜಾಗತೀಕರಣ, ಖಾಸಗೀಕರಣ ಹಾಗೂ ಉದಾರೀಕರಣದ ನೀತಿಯಿಂದಾಗಿ ಸಹಕಾರಿ ಕ್ಷೇತ್ರ ತನ್ನ ಅಸ್ತಿತ್ವವನ್ನು ತೋರ್ಪಡಿಸುವ ಹಾಗೂ ಈ ಮಾರುಕಟ್ಟೆ ವ್ಯವಸ್ಥೆಯಲ್ಲಿ ಸ್ಥಿರವಾಗಿ ನಿಲ್ಲುವ ಸವಾಲನ್ನು ಎದುರಿಸುವ ನಿಟ್ಟಿನಲ್ಲಿ ಸಹಕಾರಿ ಕ್ಷೇತ್ರ ಅನೇಕ ವಿಷಯಗಳಲ್ಲಿ ತನ್ನ ವ್ಯಾಖ್ಯಾನವನ್ನು, ತನ್ನ ಕಾರ್ಯವೈಖರಿಯನ್ನು, ನೀತಿ ನಿಯಮಗಳನ್ನು, ವಿಶೇಷವಾಗಿ ತನ್ನ ಧ್ಯೇಯ ಧೋರಣೆಗಳನ್ನು ಬದಲಾಯಿಸಿಕೊಳ್ಳುವುದು ಅನಿವಾರ್ಯವಾಗಿದೆ.

ತನ್ನ ಕಾರ್ಯವೈಖರಿಯಲ್ಲಿ ಸಮಗ್ರ ಬದಲಾವಣೆಗೆ ತಂದು ಕೊಳ್ಳುವುದು ಇಂದಿನ ಅಗತ್ಯತೆ. ಎಲ್.ಪಿ.ಜಿ.ಯ ಪರಿಣಾಮವಾಗಿ ಸಹಕಾರಿ ಕ್ಷೇತ್ರಕ್ಕೆ ನೀಡಿರುವ ಹಲವಾರು ಸವಲತ್ತುಗಳನ್ನು ತೆಗೆದು ಹಾಕಿರುವುದು ಈ ಕೆಳಗಿನ ವಿಷಯಗಳ ಮೂಲಕ ತಿಳಿಯ ಬಹುದಾಗಿದೆ ಮತ್ತು ಅವುಗಳ ಇಲ್ಲದಿರುವಿಕೆಯ ಹಿನ್ನೆಲೆಯಲ್ಲಿ ಸಹಕಾರಿ ಕ್ಷೇತ್ರ ಕಾರ್ಯನಿರ್ವಹಿಸಬೇಕಿದೆ ಮತ್ತು ತನ್ನ ವ್ಯಾಪ್ತಿಯನ್ನು ಸ್ಥಿರೀಕರಿಸಬೇಕಿದೆ.

1. ಸರಕಾರ ನಿಧಾನವಾಗಿ ತನ್ನ ನೆರವು ಹಿಂತೆಗೆಯುತ್ತಿರುವುದು.
2. ಮಾರುಕಟ್ಟೆ ವ್ಯವಸ್ಥೆಯಲ್ಲಿನ ಸಾರ್ವಭೌಮತ್ವದ ಬದಲಾವಣೆ.
3. ಸವಲತ್ತುಗಳ ಹಾಗೂ ಸೌಲಭ್ಯಗಳ ಇಲ್ಲದಿರುವಿಕೆ.
4. ತಾಂತ್ರಿಕತೆ ಬೆಳವಣಿಗೆಯ ಸವಾಲು.
5. ಅರ್ಥವ್ಯವಸ್ಥೆಯ ವೇಗದ ಬೆಳವಣಿಗೆ.
6. ಹೆಚ್ಚಿನ ಸೌಲಭ್ಯಗಳ ವಿಸ್ತರಣೆಗೆ ಸದಸ್ಯರ ಬೇಡಿಕೆ.
7. ಕಾರ್ಪೋರೇಟ್ ಹಾಗೂ ಸಹಕಾರಿ ಆಡಳಿತ ವ್ಯವಸ್ಥೆಗಳ ವ್ಯತ್ಯಾಸ ಇಲ್ಲದಿರುವುದು.

### ಸಧೃಡ ಸಹಕಾರಿ ವ್ಯವಸ್ಥೆ

ವ್ಯಕ್ತಿ ಕಾರ್ಯನಿರ್ವಹಿಸುವ ವ್ಯವಸ್ಥೆಗಿಂತ ಬಳಕೆದಾರರೇ ಮಾಲೀಕರಾಗಿ ಕಾರ್ಯನಿರ್ವಹಿಸುತ್ತಿರುವ ಸಹಕಾರಿ ಸಂಸ್ಥೆಗಳಲ್ಲಿ ಅನುಕೂಲಗಳು.

1. ಸೇವಾ ಮನೋಭಾವ
2. ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆ
3. ಕಡಿಮೆ ವೆಚ್ಚದ ನಿರ್ವಹಣೆ



4. ಎಲ್ಲ ರಾಜಕೀಯ ಪಕ್ಷಗಳ ಬೆಂಬಲ
5. ಸಮಾಜದ ಪ್ರೋತ್ಸಾಹ
6. ಸಮಾಜದ ಉದ್ದಗಲಕ್ಕೂ ಹರಡಿರುವ ಕಾರ್ಯನಿರ್ವಹಣೆಯ ಸಹಕಾರಿ ಜಾಲ

### ಸಾಂಸ್ಥಿಕ ಸಂಕಷ್ಟಗಳು (Organisational Crises)

ಸಹಕಾರಿ ಸಂಸ್ಥೆಗಳು ಎದುರಿಸುತ್ತಿರುವ ಸಾಂಸ್ಥಿಕ ಸಂಕಷ್ಟಗಳು ಈ ಕೆಳಗಿನಂತಿವೆ.

1. ಗುರುತಿಸಿಕೊಳ್ಳುವಿಕೆ (Identity crises)
2. ಸಂಬಂಧಗಳು ಕಡಿಮೆಗೊಳ್ಳುತ್ತಿರುವುದು (Breakdown of linkages)
3. ಸಂಸ್ಥೆಯ ವ್ಯಕ್ತಿತ್ವ ವಿಕಾಸಗೊಳ್ಳದಿರುವಿಕೆ (loss of organisational focus)
4. ಪರಿಣಾಮಕಾರಿ ಆಡಳಿತದ ಅಭಾವ (Governance deficiency)
5. ಸಾಂಸ್ಥಿಕ ಅಸಮತೋಲನಗಳು (Irrelevant organisational structure)
6. ಅನಾನುಕೂಲದ ಆಡಳಿತ ಮಂಡಲಿಯ ಕಾರ್ಯಶೈಲಿ (Highly damaging management style)
7. ಹಳೆಯ ತಂತ್ರಜ್ಞಾನ (Outdated technology)
8. ಸದಸ್ಯರ ಸಕ್ರಿಯ ಭಾಗವಹಿಸುವಿಕೆ ಇಲ್ಲದಿರುವುದು (Non participation of members)
9. ವ್ಯವಹಾರ ವ್ಯವಸ್ಥೆಗಳ ನಿರ್ವಹಣೆಯಲ್ಲಿ ಪರಿಣಾಮ ವಿಲ್ಲದಿರುವುದು (Ineffective operative methods)

10. ಬದಲಾವಣೆ ಇರದ ಕಾರ್ಯವೈಖರಿ (Outdated monitoring meinaism)

**ಹೇಗೆ ಮುಂದುವರಿಯುವುದು? (How to go about)**

ಸಹಕಾರಿ ಸಂಸ್ಥೆಗಳು ತಮ್ಮ ಕಾರ್ಯ ಸುಧಾರಣೆಗಾಗಿ ತಕ್ಷಣದಲ್ಲಿ ಅಳವಡಿಸಿಕೊಳ್ಳಬೇಕಿರುವ ಬಗ್ಗೆ ಸಲಹೆಗಳು;

1. ನಿಮ್ಮ ಧ್ಯೇಯ ಧೋರಣೆಗಳನ್ನು ಮರು ವ್ಯಾಖ್ಯಾನಿಸಿ ಪ್ರಚುರಪಡಿಸಿ.
2. ಸಹಕಾರಿ ನಾಯಕರುಗಳಿಗೆ ನೀತಿ ಸಂಹಿತೆಯನ್ನು ರೂಪಿಸಿ.
3. ವೃತ್ತಿ ಪರಿಣಿತರನ್ನು ಮುಖ್ಯಕಾರ್ಯನಿರ್ವಾಹಕರ ಹುದ್ದೆಗೆ ಹಾಗೂ ಪ್ರಮುಖ ಹುದ್ದೆಗಳಿಗೆ ನೇಮಕ ಮಾಡಿ.
4. ಸಂಸ್ಥೆಯ ಆಡಳಿತ ನಿರ್ವಹಣೆ ಮೌಲ್ಯಮಾಪನ.
5. ಎರವಲು ಸೇವೆಯ (ಡೆಪ್ಯೂಟೇಶನ್) ವ್ಯವಸ್ಥೆ ನಿಲ್ಲಿಸಿ.
6. ನಾಮಿನೇಶನ್ ಪದ್ಧತಿ ನಿಲ್ಲಿಸಿ.
7. ಮಾನವೀಯ ಸಂಪನ್ಮೂಲ ಅಭಿವೃದ್ಧಿ ಕಾರ್ಯಕ್ರಮಗಳನ್ನು ಆಯೋಜಿಸಿ.
8. ಸಹಕಾರಿ ಸಂಸ್ಥೆಯನ್ನು ಮಾಹಿತಿ ಕೇಂದ್ರವನ್ನಾಗಿ ಪರಿವರ್ತಿಸಿ.
9. ಅಧ್ಯಯನ ವರದಿಗಳನ್ನು ಅಧ್ಯಯನ ಮಾಡಿ.

**ಬದಲಾವಣೆಯ ಕ್ಷೇತ್ರಗಳು (Areas of changes)**

ಸಹಕಾರ ಕ್ಷೇತ್ರದ ಅಭಿವೃದ್ಧಿಗಾಗಿ ಸಮಗ್ರ ಬದಲಾವಣೆಯನ್ನು ಈ ಕೆಳಕಂಡ ಕ್ಷೇತ್ರಗಳಲ್ಲಿ ತರಬಹುದಾಗಿದೆ.

| | | |
|---|---|---|
| 1. | ಸ್ವರೂಪ | structure |
| 2. | ಪದ್ಧತಿ | System |
| 3. | ಕಾರ್ಯ ಶೈಲಿ | Style |
| 4. | ಸಿಬ್ಬಂದಿ | Staff |
| 5. | ಕೌಶಲ್ಯ | Skill |
| 6. | ಕಾರ್ಯತಂತ್ರ | Strategy |

**ಸಹಕಾರಿ ಕ್ಷೇತ್ರದ ಭವಿಷ್ಯದ ದಾರಿ (Road map for future)**

ನೀತಿ ರೂಪಿಸುವ ಜವಾಬ್ದಾರಿಯಿರುವವರು ಈ ಮೇಲ್ಕಂಡ ವಿಷಯಗಳನ್ನು ಅವಲೋಕಿಸಿ, ಅವುಗಳ ಅಧ್ಯಯನ ಮಾಡಿ, ಸಮಗ್ರ ಸಹಕಾರಿ ಕ್ಷೇತ್ರದ ಅಭಿವೃದ್ಧಿಯನ್ನು ಗಮನದಲ್ಲಿರಿಸಿ, ಮುಂಬರುವ ದಿನಗಳಲ್ಲಿ ಕಾರ್ಯತಂತ್ರಗಳನ್ನು ರೂಪಿಸುವುದು ಅಗತ್ಯವೆನಿಸುತ್ತದೆ. ಹಾಗೇ ಹೊಸ ನೀತಿ ಮಾಡುವಾಗ ಸಹಕಾರ ಕ್ಷೇತ್ರದ ಶಕ್ತಿಯನ್ನು ಹಾಗೂ ವ್ಯಾಪ್ತಿಯನ್ನು, ಇತಿಮಿತಿಗಳನ್ನು ಗಮನದಲ್ಲಿರಿಸಬೇಕು.

**ತನ್ನ ಕಾರ್ಯವೈಖರಿಯಲ್ಲಿ ಸಮಗ್ರ ಬದಲಾವಣೆಗೆ ತಂದು ಕೊಳ್ಳುವುದು ಇಂದಿನ ಅಗತ್ಯತೆ. ಎಲ್.ಪಿ.ಜಿ.ಯ ಪರಿಣಾಮವಾಗಿ ಸಹಕಾರಿ ಕ್ಷೇತ್ರಕ್ಕೆ ನೀಡಿರುವ ಹಲವಾರು ಸವಲತ್ತುಗಳನ್ನು ತೆಗೆದು ಹಾಕಿರುವುದು ಈ ಕೆಳಗಿನ ವಿಷಯಗಳ ಮೂಲಕ ತಿಳಿಯ ಬಹುದಾಗಿದೆ ಮತ್ತು ಅವುಗಳ ಇಲ್ಲದಿರುವಿಕೆಯ ಹಿನ್ನೆಲೆಯಲ್ಲಿ ಸಹಕಾರಿ ಕ್ಷೇತ್ರ ಕಾರ್ಯನಿರ್ವಹಿಸಬೇಕಿದೆ ಮತ್ತು ತನ್ನ ವ್ಯಾಪ್ತಿಯನ್ನು ಸ್ಥಿರೀಕರಿಸಬೇಕಿದೆ.**

ಸಹಕಾರ ಕ್ಷೇತ್ರ ಯಾವುದೂ ಮತ್ತು ಎಂತಹದೂ ಅರ್ಥವ್ಯವಸ್ಥೆಯನ್ನು ಅಳವಡಿಸಿಕೊಂಡು ನಿರ್ವಹಿಸಲು ಸಾಧ್ಯವಿಲ್ಲವೆಂಬುದನ್ನು ಹಿಂದಿನ ಅನುಭವಗಳಿಂದ ತಿಳಿಯಬೇಕು.

ದುರ್ದೈವದಿಂದ ನೀತಿ ನಿರೂಪಣೆಕಾರರು ಸಹಕಾರಿ ಕ್ಷೇತ್ರದ ಈ ಇತಿಮಿತಿಗಳನ್ನು (Limitation) ಅರ್ಥ ಮಾಡಿಕೊಳ್ಳದೇ ಅವುಗಳ ಶಕ್ತಿ ಸಾಮರ್ಥ್ಯಗಳನ್ನು ಅಂದಾಜು ಮಾಡದೇ ಕಾರ್ಯಗಳನ್ನು ವಹಿಸಿ, ಅವುಗಳು ವಿಫಲವಾದಾಗ ಸಹಕಾರಿ ಕ್ಷೇತ್ರವನ್ನು ಸಹಕಾರಿಗಳನ್ನು ದೂಷಿಸುವುದು ನಿಲ್ಲಬೇಕು.

**ಸಹಕಾರಿ ಕ್ಷೇತ್ರದ ಯಶಸ್ಸು**

ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಸಮಗ್ರ ಅಧ್ಯಯನ, ಸಹಕಾರಿಗಳ, ಸರಕಾರಗಳ ಹಾಗೂ ಸಾರ್ವಜನಿಕ ಕ್ಷೇತ್ರಗಳ ಅಧ್ಯಯನದ ಆಧಾರದ ಮೇಲೆ ಸಹಕಾರಿ ಕ್ಷೇತ್ರದ ಅಭಿವೃದ್ಧಿ ಈ ಕೆಳಕಂಡ ವಿಷಯಗಳ ಮೇಲೆ ಅವಲಂಬಿತವಾಗಿದೆ ಎಂಬುದನ್ನು ಸ್ಪಷ್ಟವಾಗಿ ಹೇಳಬಹುದು.

1. ಬದ್ಧತೆಯುಳ್ಳ ನಾಯಕತ್ವ
2. ವೃತ್ತಿಪರ ಆಡಳಿತ
3. ಸದಸ್ಯರ ಸಕ್ರಿಯ ಭಾಗವಹಿಸುವಿಕೆ

ಸಹಕಾರಿ ಕ್ಷೇತ್ರದ ಮುಂಬರುವ ದಾರಿ ಸುಗಮವಿಲ್ಲ.

ವೇಗದ ಓಟ, ಪೈಪೋಟಿ ಮತ್ತು ಗುಣಮಟ್ಟದ ತತ್‌ಕ್ಷಣದಲ್ಲಿ ಮನೆಬಾಗಿಲಿಗೆ ಲಭ್ಯವಾಗುವ ಸೇವೆಗಳ ಯುಗದಲ್ಲಿ ಸಹಕಾರಿ ಕ್ಷೇತ್ರದ ಓಟ ಹಾಗೂ ಗುರಿ ಸಾಧಿಸುವಿಕೆ ಕಷ್ಟಸಾಧ್ಯ. ಆದಾಗ್ಯೂ, ಈ ಕ್ಷೇತ್ರ ಉಳಿಯಲೇಬೇಕು, ಬೆಳೆಯಲೇಬೇಕು ಎಂಬುವ ಸಹಕಾರಿ ತಜ್ಞರ ಅಭಿಪ್ರಾಯ ಹಾಗೂ ಸಹಕಾರಿಗಳ ನಿರಂತರ ಪರಿಶ್ರಮದಿಂದ ಸಹಕಾರಿ ಕ್ಷೇತ್ರದ ಅಭಿವೃದ್ಧಿ ಸಾಧ್ಯ ಎಂಬುವುದರಲ್ಲಿ ಎರಡು ಮಾತಿಲ್ಲ. ■

# "ಸ್ವಚ್ಛ ಭಾರತ ಯೋಜನೆಯಡಿಯಲ್ಲಿ" ಸಾಂಸ್ಕೃತಿಕ ನಗರ ಮೈಸೂರು ಇದೀಗ ದೇಶದ ನಂ.1 ಸ್ವಚ್ಛ ನಗರ

## ಈ ಯೋಜನೆಯ ಅನುಷ್ಠಾನದಲ್ಲಿ ಸಹಕಾರಿಗಳು ಭಾಗಿ

– ಶಿವಪ್ರಸಾದ್ ಟಿ., ಕಿರಿಯ ಸಹಾಯಕ, ಹಣಕಾಸು ವಿಭಾಗ, ಬೆಂಗಳೂರು

ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಮಹತ್ವಾಕಾಂಕ್ಷೆ ಯೋಜನೆಗಳಲ್ಲಿ ಒಂದಾದ 'ಸ್ವಚ್ಛ ಭಾರತ' ಯೋಜನೆಗೀಗ ಎರಡನೇ ವರ್ಷದ ಸಂಭ್ರಮ. ಈ ಯೋಜನೆ ದೇಶದ ನಗರ ಮತ್ತು ಗ್ರಾಮೀಣ ಭಾಗಗಳಿಗೆ ಅನ್ವಯವಾಗಿದ್ದು, ಮುಖ್ಯವಾಗಿ ಗ್ರಾಮೀಣ ಭಾರತದಲ್ಲಿ ಶೌಚಾಲಯ ಮತ್ತು ಸ್ವಚ್ಛತೆಯನ್ನು ಕಾಪಾಡಲು ಮತ್ತು ಸುಧಾರಣೆಗೆ ತರಲು ಈ ಯೋಜನೆ ಜಾರಿಯಲ್ಲಿದೆ.

ಈ ಸ್ವಚ್ಛತೆಯ ವಿಷಯವು ಹೊಸತಲ್ಲದಾದರೂ ರಾಷ್ಟ್ರಪಿತ ಮಹಾತ್ಮ ಗಾಂಧೀಯವರ ಭವ್ಯ ಭಾರತದ ಕನಸ್ಸಿನ ಕೂಸಾಗಿತ್ತು. ಇದನ್ನು ಸಾರ್ಥಕಗೊಳಿಸಲು 'ಒಂದು ಹೆಜ್ಜೆ ಸ್ವಚ್ಛತೆ ಕಡೆಗೆ' ಎಂದೇ ದೇಶದ ಪ್ರಜೆಗಳನ್ನು ಪ್ರೇರೇಪಿಸಿ ಸ್ವತಃ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರೇ ಪೊರಕೆ ಹಿಡಿದು ಚಾಲನೆ ನೀಡಿರುವುದು ಸ್ವಾಗತಾರ್ಹ. ಕೇಂದ್ರ ಸರ್ಕಾರ ಈ ಯೋಜನೆ ಅಭಿಯಾನದ ಅಡಿಯಲ್ಲಿ ಸ್ವಚ್ಛತೆ ಮತ್ತು ತ್ಯಾಜ್ಯ ನಿರ್ವಹಣೆ ಆಧರಿಸಿ, ಕೇಂದ್ರ ನಗರಾಭಿವೃದ್ಧಿ ಸಚಿವಾಲಯ 15 ಫೆಬ್ರವರಿ 2016ರಲ್ಲಿ ಸಮೀಕ್ಷೆ ನಡೆಸಿ, ರ್‍ಯಾಂಕಿಂಗ್ ಪಟ್ಟಿ ಬಿಡುಗಡೆ ಮಾಡಲಾಯಿತು. ಈ ಪಟ್ಟಿಯ ಪ್ರಕಾರ 10 ಸ್ಥಾನಗಳು ಘೋಷಿಸಿತು. ಆ 10 ಸ್ಥಾನದಲ್ಲಿ ಮೊದಲನೇ ಸ್ಥಾನವು ನಮ್ಮ ರಾಜ್ಯದ ಹೆಮ್ಮೆಯ ನಗರ ಹಾಗೂ ಸಾಂಸ್ಕೃತಿಕ ನೆಲೆಬೀಡಾಗಿರುವ ಮೈಸೂರು ಪ್ರಥಮ ಸ್ಥಾನ ಪುನಃ ಎರಡನೇ ಬಾರಿಗೆ ಪಡೆದುಕೊಂಡಿರುವುದು ನಮಗೆ ಹೆಮ್ಮೆಯ ಸಂಗತಿ. ಅಲ್ಲದೇ, ಸಾಂಸ್ಕೃತಿಕ ರಾಜಧಾನಿ, ಅರಮನೆ ನಗರಿ, ಪಾರಂಪರಿಕ ಹಿನ್ನೆಲೆ ನಾಡು, ತಾಯಿ ಶ್ರೀ ಚಾಮುಂಡೇಶ್ವರಿಯ ನೆಲೆವೀಡು, ಪ್ರವಾಸಿಗರ ಸ್ವರ್ಗ ಈ ಎಲ್ಲಾ ಹೆಸರಿನ ಜೊತೆಗೆ ಸ್ವಚ್ಛ ನಗರ ಎಂಬ ಮತ್ತೊಂದು 'ಗರಿ' ನಮ್ಮ ಹೆಮ್ಮೆಯ ಮೈಸೂರಿಗೆ ಬಂದಿದೆ.

ಕಸ ಸಂಗ್ರಹಣೆ, ಸಾಗಾಣಿಕೆ, ನಿರ್ವಹಣೆ, ಜೊತೆಗೆ ಶೇಕಡ 98ರಷ್ಟು ಬಯಲು ಮುಕ್ತ ಶೌಚಾಲಯ ನಗರವಾಗಿರುವ ಮೈಸೂರಿಗೆ ದೇಶದಲ್ಲೇ ಮೊದಲ ಸ್ವಚ್ಛ ನಗರ ಎಂಬ ಕೀರ್ತಿ ತಂದಿದೆ.

**'ಸ್ವಚ್ಛ ಭಾರತ' ಯೋಜನಾ ಸಮೀಕ್ಷೆಗೆ ಪರಿಗಣಿಸಿದ ಮೂಲಾಂಶಗಳು :**

1. ಬಯಲು ಮುಕ್ತ ಶೌಚಾಲಯ ಮತ್ತು ಇದನ್ನು ಪಾಲಿಸಲು ಆ ನಗರ ಹಾಕಿಕೊಂಡಿರುವ ಯೋಜನೆ ಮತ್ತು ಅನುಷ್ಠಾನ.
2. ಸ್ವಚ್ಛತೆ ಕುರಿತು ಅರಿವು ಮೂಡಿಸಲು ಮಾಹಿತಿ, ಶಿಕ್ಷಣ ಮತ್ತು ಸಂವಹನ.
3. ತ್ಯಾಜ್ಯ ನಿರ್ವಹಣೆ **(Waste Management),** ಕಸ ಸಂಗ್ರಹಣೆ, ನಿರ್ವಹಣೆ ವಿಧಾನ ಮತ್ತು ವಿಲೇವಾರಿ, ನೈರ್ಮಲೀಕರಣ.



4. ಸಾರ್ವಜನಿಕ ಮತ್ತು ಸಮುದಾಯ ಶೌಚಾಲಯ.
5. ಪ್ರತಿ ಮನೆಯಲ್ಲಿ ಶೌಚಾಲಯ.

ಈ ಮೂಲ ಅಂಶಗಳಿಂದ ಸಮೀಕ್ಷೆ ನಡೆಸಿ, ಪ್ರತಿ ವರ್ಷ ಅತ್ಯುತ್ತಮ ನಗರಗಳ ಪಟ್ಟಿ ಪ್ರಕಟಣೆ ಮಾಡುತ್ತಾರೆ. ಸಮೀಕ್ಷೆಯ ಪ್ರಥಮ ಪಟ್ಟಿಯನ್ನು ಸ್ವತಃ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರೇ ಚಾಲನೆ ನೀಡಿದ್ದರು.

**ಸಮೀಕ್ಷೆಯ ಪ್ರಕಾರ ಮೊದಲ ಹತ್ತು ಸ್ಥಾನಗಳಲ್ಲಿರುವ ನಗರಗಳು :**

1. ಮೈಸೂರು 2. ಚಂಡೀಗಢ 3. ತಿರುಚನಾಪಳ್ಳಿ
4. ನವದೆಹಲಿ 5. ವಿಶಾಖಪಟ್ಟಣ 6. ಸೂರತ್
7. ರಾಜ್ ಕೋಟ್ 8. ಗ್ಯಾಂಗ್ ಕೋಟ್
9. ಪಿಂಪ್ರಿ ಚಿಂದ್ವಾಡ 10. ಮುಂಬಾಯಿ

2014ರಲ್ಲಿ ಮೊದಲ ಬಾರಿಗೆ ಸಮೀಕ್ಷೆ ನಡೆಸಿ, ಕಳೆದ ವರ್ಷ ಆಗಸ್ಟ್‌ನಲ್ಲಿ ಸುಮಾರು 476 ಸ್ವಚ್ಛ ನಗರಗಳನ್ನು ವರದಿ ಮಾಡಿತ್ತು, ಈ ಸಮೀಕ್ಷೆ ಪ್ರಕಾರ ಬೆಂಗಳೂರು ನಗರವು 7ನೇ ಸ್ಥಾನದಲ್ಲಿತ್ತು. ಆದರೆ, ಈ ಬಾರಿ ಸಮೀಕ್ಷೆ ಪ್ರಕಾರ 38ನೇ ಸ್ಥಾನಕ್ಕೆ ಕುಸಿದಿದೆ.

**ಈ ಸಮೀಕ್ಷೆಯಲ್ಲಿ ಸ್ಥಾನ ಪಡೆದ ನಗರಗಳಿಗಾಗುವ ಉಪಯೋಗ :**

1. ಪ್ರವಾಸಿ ನಗರವಾಗಿ ಇನ್ನಷ್ಟು ಜನರನ್ನು ಆಕರ್ಷಿಸುತ್ತದೆ.
2. ಸ್ವಚ್ಛ ನಗರಿ ಎನ್ನುವ ಕಾರಣಕ್ಕೆ ಉದ್ಯಮಗಳು ಇನ್ನಷ್ಟು ಹೂಡಿಕೆ ಯಾಗುವ ಸಾಧ್ಯತೆಗಳಿವೆ.
3. ಸಾರ್ವಜನಿಕರಿಗೆ ವಾಸಯೋಗ್ಯ ನಗರವೆಂದು ಹೆಚ್ಚಿನ ಜನ ನಿವೇಶನ ಖರೀದಿಸಲು ಮುಂದಾಗುವರು.
4. ಅಲ್ಲದೇ ನಗರದ ಆರೋಗ್ಯ ಹಾಗೂ ಸ್ವಾಸ್ಥ್ಯ ದೃಷ್ಟಿಯಿಂದ ಅನುಕೂಲ.

**ಸಮೀಕ್ಷೆ ಪಟ್ಟಿ ಪ್ರಕಾರವು ಪ್ರಮುಖ 10 ಕೊಳಚೆ ನಗರಗಳು :**

ಹೌದು, ಈ ಸಮೀಕ್ಷೆ ಕೇವಲ ಪ್ರಚಾರಕಲ್ಲ, ಸಾಮಾಜಿಕ ಸ್ವಾಸ್ಥ್ಯವನ್ನು ಪರಿಗಣನೆಗೆ ಪಡೆದು, ಉತ್ತಮ ನಗರ ಗುರುತಿಸುವುದರ ಜೊತೆಗೆ ಹಿಂದಿರುವ ನಗರಗಳನ್ನು ಪಟ್ಟಿ ಮಾಡಿ, ಆಯಾ ನಗರದ ಕೊಳಚೆಗೆ ಕಾರಣ ಮತ್ತು ಸ್ವಚ್ಛತೆ ಬಗ್ಗೆ ಇರುವ ಅನಿವಾರ್ಯತೆಯೇನು ಎಂಬುದನ್ನು ತಿಳಿಸಿಕೊಡುವುದಾಗಿದೆ. ಅದರಂತೆ ದೇಶದ 10 ಕೊಳಚೆ ಪ್ರದೇಶ ನಗರಗಳು ಕೆಳಗಿನಂತಿವೆ;



1. ಧನಬಾದ್ 2. ಅಸನ್ ಸೋಲ್ 3. ಇಟಾ ನಗರ್
4. ಪಾಟ್ನ 5. ಮೀರತ್ 6. ರಾಯಪುರ
7. ಘಾಜಿಯಾಬಾದ್ 8. ಜೆಮ್‌ಶೆಡ್‌ಪುರ
9. ವಾರಣಾಸಿ 10. ಕಲ್ಯಾಣ್-ದೋಂಬಿವಿಲಿ

ಈ ಪ್ರಮುಖ ಹತ್ತು ನಗರಗಳಲ್ಲದೇ ಇದೇ ತರಹದ ಇನ್ನೂ ಹಲವು ಪ್ರದೇಶಗಳು ಕೊಳಚೆಯಿಂದ ಕೂಡಿರುವುದು ನಮ್ಮ ಕಣ್ಮುಂದೆಯೇ ಇದೆ. ಇದನ್ನು ಗಮನದಲ್ಲಿ ಇಟ್ಟುಕೊಂಡು ಸ್ವಚ್ಛತೆಯೆಡೆಗೆ ಒಂದು ಹೆಜ್ಜೆ ನಡೆದರೆ ಎಲ್ಲಾ ನಗರಗಳು ನಮ್ಮ ಮೈಸೂರಿನಂತೆ ಸ್ವಚ್ಛವಾಗಿ ನಂ.1 ಸ್ಥಾನದಲ್ಲಿರುತ್ತದೆ.

**ಕೇಂದ್ರ ಬಜೆಟ್‌ನಲ್ಲೂ ಸ್ವಚ್ಛ ಭಾರತ ಆಂದೋಲನಕ್ಕೆ ಮೀಸಲು :**

ಈ ಬಾರಿಯ 2016-17ನೇ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಸರ್ಕಾರದ ಯೋಜನೆಯಾದ ಸ್ವಚ್ಛ ಭಾರತ ಅಭಿಯಾನ ಕಾರ್ಯಕ್ರಮಕ್ಕೆ ರೂ.11,300 ಸಾವಿರ ಕೋಟಿ ಮೀಸಲಿಡಲಾಗಿದೆ.

- ಕ್ರಮವಾಗಿ ಗ್ರಾಮೀಣ ಭಾಗಕ್ಕೆ ರೂ. ಒಂಭತ್ತು ಸಾವಿರ ಕೋಟಿ ಹಾಗೂ ನಗರ ಭಾಗಕ್ಕೆ ರೂ.2,300 ಕೋಟಿ ಹಂಚಿಕೆ ಮಾಡಲಾಗಿದೆ.
- ಗಾಂಧಿಜೀಯವರ 145ನೇ ಜಯಂತಿ 2 ಅಕ್ಟೋಬರ್ 2014 ರಂದು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಈ ಯೋಜನೆಯನ್ನು ದೇಶದ 4,041 ನಗರಗಳಲ್ಲಿ ಅನಾವರಣಗೊಳಿಸಿದರು.
- 2019ರ ವೇಳೆಗೆ ಮಹಾತ್ಮ ಗಾಂಧೀಜಿ ಅವರ 150ನೇ ಜನ್ಮ ದಿನಾಚರಣೆ ವೇಳೆಗೆ 'ಸ್ವಚ್ಛ ಭಾರತ ಅಭಿಯಾನ' ಗುರಿ ಸಾಧಿಸಲು ಯೋಜಿಸಲಾಗಿದೆ.
- ಸೇವಾ ತೆರಿಗೆಯ ಒಟ್ಟು ಶೇಕಡ 14.05ನಲ್ಲಿ ಶೇಕಡ 0.05ರಷ್ಟು ಸ್ವಚ್ಛ ಭಾರತ ಸೆಸ್ ಎಂದು ಘೋಷಿಸಿ, ಆ ಆದಾಯವನ್ನು ತೆರಿಗೆ ಸಲ್ಲಿಸುವ ಜೊತೆಗೆ ಪಾವತಿಸಲು ಸೂಚಿಸಿದೆ ಹಾಗೂ ಜಾರಿಗೆ ಸಹ ಈ ವರ್ಷದಿಂದಲೇ ಬಂದಿದೆ.

**ಸ್ವಚ್ಛ ಭಾರತ ಆಂದೋಲನದೊಂದಿಗೆ ರಾಜ್ಯದ ಸೌಹಾರ್ದ ಸಹಕಾರಿಗಳು :**

ಈ ಯೋಜನೆ ಆರಂಭದಲ್ಲಿ ದೇಶದಾದ್ಯಂತ ಸಂಚಲನ ಮೂಡಿಸುವ ನಿಟ್ಟಿನಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು 'ಪ್ರಧಾನ ಸೇವಕ'ನಂತೆ ಕಾರ್ಯನಿರ್ವಹಿಸುತ್ತಿದ್ದಾರೆ. ಇದೇ ಉತ್ಸಾಹ ಪರಿಗಣಿಸಿ, ಆಂದೋಲನ ಪ್ರಾರಂಭಿಕ ಹಂತದಲ್ಲಿ ಸೌಹಾರ್ದ ಸಂಯುಕ್ತ ಸಹಕಾರಿ ಆಡಳಿತ ಮಂಡಲಿ, ಸಿಬ್ಬಂದಿ ವರ್ಗ ಆದಿಯಾಗಿ "ಸೌಹಾರ್ದ ಸಹಕಾರಿ ದಿನಚಾರಣೆ" ಹಾಗೂ 2015ನೇ ವರ್ಷ "ಸ್ವಚ್ಛತಾ ಸಪ್ತಾಹ ವರ್ಷ" ಎಂದು ಘೋಷಿಸಿತು. ಈ ಉದ್ಘಾಟನಾ ಸಮಾರಂಭಕ್ಕೆ ಮುಖ್ಯ ಅಥಿತಿಯಾಗಿ ಆಗಮಿಸಿದ್ದ ಮಾಜಿ ಕಾನೂನು ಸಚಿವರು, ಶಾಸಕರು ಆದ ಶ್ರೀಯುತ ಸುರೇಶಕುಮಾರವರು ಧ್ವಜಾರೋಹಣ ಮಾಡಿ, ಸೌಹಾರ್ದ ಸಂಯುಕ್ತ ಸಹಕಾರಿ ಕೈಗೊಂಡ ಈ ಸ್ವಚ್ಛತಾ ಸಪ್ತಾಹವು ಶ್ಲಾಘನೀಯ ಹಾಗೂ ಸಮಾಜಮುಖಿಯಾಗಿ ಕಾರ್ಯಗತಗೊಂಡ ಭರವಸೆಗಳು ಸಾಕಾರಗೊಳ್ಳುವ ವರ್ಷವಾಗಲಿ ಎಂದು ಶುಭಹಾರೈಸಿದರು. ಅವರ ಹಾರೈಕೆಯಂತೆ "ಸ್ವಚ್ಛತಾ ಸಪ್ತಾಹ ವರ್ಷ" ಕಾರ್ಯಾರಂಭ ನಂತರ ರಾಜ್ಯದಾದ್ಯಂತ ನಾನಾ ಭಾಗಗಳಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವ ಸೌಹಾರ್ದ ಸಹಕಾರಿಗಳು ಕ್ರಿಯಾಶೀಲರಾಗಿ ಪಾಲ್ಗೊಂಡು, ತಮ್ಮ ಕಛೇರಿಯ ಜೊತೆ ಸುತ್ತ-ಮುತ್ತಲ ಪ್ರದೇಶ, ಅಂಗನವಾಡಿ ಕೇಂದ್ರ, ಶಾಲಾ-ಕಾಲೇಜಿನ ಆವರಣದ ಶುಚಿತ್ವಕ್ಕೆ ಮುಂದಾದವು, ಈ ಎಲ್ಲಾ ಕಾರ್ಯಗಳು ಅಂದಿನಿಂದ ಇಲ್ಲಿಯವರೆಗೂ ಯಶಸ್ವಿಯಾಗಿ ನಡೆದಿವೆ ಹಾಗೂ ಪ್ರಸ್ತುತ ಚಾಲನೆಯಲ್ಲಿವೆ. ಈ ಸಪ್ತಾಹದ ಧ್ಯೇಯೋದ್ದೇಶವಾದ 'ಸ್ವಚ್ಛ ಭಾರತಕ್ಕಾಗಿ ಸಹಕಾರಿಗಳು' ಎಂಬ ಘೋಷವಾಕ್ಯವನ್ನು ಸಾಕಾರಗೊಳಿಸಿದೆ.

ಇದಲ್ಲದೇ, ನಮ್ಮ ಸಂಯುಕ್ತ ಸಹಕಾರಿಯ ಪ್ರಸ್ತುತ ಉಪಾಧ್ಯಕ್ಷರಾದ ಶ್ರೀಯುತ ಹೆಚ್.ವಿ.ರಾಜೀವ್‌ರವರು ಒಂದು ಹೆಜ್ಜೆ ಮುನ್ನೆಡೆದು ಸ್ವಚ್ಛತೆ ಗುರಿ ಸಾಧಿಸಲು ಉತ್ಸುಕತೆಯಿಂದ ತಮ್ಮ ಮೈಸೂರು ನಗರವನ್ನು ನಂ.1 ಮಟ್ಟಕ್ಕೇರಲು ಕಾರಣೀಭೂತರಾಗಿದ್ದಾರೆ. ಅಲ್ಲದೇ, ಸ್ವಚ್ಛ ಭಾರತ ಆಂದೋಲನದ ರ್‍ಯಾಂಕಿಂಗ್ ಪಟ್ಟಿ ಬಿಡುಗಡೆ ಸಮಾರಂಭದಲ್ಲಿ ಮೈಸೂರು ನಗರದ ಪ್ರತಿನಿಧಿಯಾಗಿ ಪ್ರಶಸ್ತಿ ಪಡೆದಿರುವುದು ಅಭಿಮಾನದ ಸಂಗತಿ. ಈ ಎಲ್ಲಾ ಪ್ರೇರೇಪಣೆ, ಸಾಧನೆ, ಅವಕಾಶಗಳನ್ನು ಗಮನದಲ್ಲಿರಿಸಿ ಕೊಂಡು ಬದಲಾವಣೆ ಎಂಬುದೇನಾದರೂ ತರಬೇಕೆಂದಿದ್ದರೆ ಮೊದಲು ನಮ್ಮ ಸುತ್ತ-ಮುತ್ತಲ ಪರಿಸರದೆಡೆಗೆ ಗಮನಹರಿಸಿ ಸ್ವಯಂ ಪ್ರೇರಿತರಾಗಿ ಕಾರ್ಯಗತಗೊಂಡಾಗಲೇ ಅಭಿವೃದ್ಧಿ ಸಾಧ್ಯ. ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಮಾತಿನಂತೆ 'ಸಬ್ ಕಾ ಸಾಥ್ - ಸಬ್ ಕಾ ವಿಕಾಸ್' (ಎಲ್ಲರೊಂದಿಗೆ ಜೊತೆಗೂಡಿ-ಎಲ್ಲರಿಗೂ ಏಳಿಗೆ) ಹಾಗೂ 'ಏಕ್ ಕದಂ ಸ್ವಚ್ಛತಾಕೀ ಓರ್' (ಒಂದು ಹೆಜ್ಜೆ ಸ್ವಚ್ಛತೆಯೆಡೆಗೆ) ಎಂಬ ನಾಣ್ನುಡಿಗೆ ಸಾರ್ಥಕವಾಗುತ್ತದೆ. ಹಾಗೇ ಪರಿಸರ ಕಾಳಜಿ, ಸಾಮಾಜಿಕ ಸ್ವಾಸ್ಥ್ಯ ಆರೋಗ್ಯದ ಬಗ್ಗೆ ಗಮನಹರಿಸುವ ಹಾಗೂ ಪ್ರತಿ ನಗರವು ಮೈಸೂರು ನಗರದಂತೆ ದೇಶದ ನಂ.1 ಸ್ವಚ್ಛ ನಗರಿಯಾಗಬೇಕೆಂಬುದು ಈ ಯೋಜನೆ ಆಶಯವಾಗಿದೆ.

ಮಾಹಿತಿ : http://swachhbharaturban.gov.in/ISNAHome.aspx, http://inbministry. blogspot.in/p/canvas.html & also leading News papers



# NEWS - MARCH 2016

**K. Vittal Shetty,** kohimavittal@hotmail.com. Mobile : 9845699904

## I. IMPORTANT NEWS

**Mar 01, 2016 :** RBI brings Capital Treatment of Banks' Balance Sheet Items in closer Alignment with Basel Framework. On a review of the existing capital adequacy guidelines, RBI made some amendments to the treatment of certain balance sheet items for the purposes of determining banks' regulatory capital. The review was carried out with a view to further aligning the definition of regulatory capital with the internationally adopted Basel III capital standards, issued by the Basel Committee on Banking Supervision (BCBS).

**The salient features of the amendments are :**

- Revaluation reserves arising from change in the carrying amount of a bank's property consequent upon its revaluation would be considered as common equity tier 1 capital (CET1) instead of Tier 2 capital as hitherto. These would continue to be reckoned at a discount of 55 per cent.
- Foreign currency translation reserves arising due to translation of financial statements of a bank's foreign operations to the reporting currency may be considered as CET1 capital. These will be reckoned at a discount of 25 per cent.
- Deferred tax assets arising due to timing differences may be recognised as CET1 capital up to 10% of a bank's CET1 capital.

Mar 08, 2016- RBI Seeks Feedback on Concept Paper on Card Acceptance Infrastructure

RBI has placed on its website the Concept Paper on Card Acceptance Infrastructure. Comments may be emailed or sent by post to the Chief General Manager, Department of Payment and Settlement Systems, Reserve Bank of India, Central Office, 14th Floor, Shahid Bhagat Singh Marg, Mumbai - 400001 on or before April 15, 2016. This concept paper has been prepared taking into account the inputs gathered during various interactions with the stakeholders. The paper outlines strategic options for addressing the issue of both expansion of card acceptance infrastructure as well as rationalisation of MDR.

To this end, the Reserve Bank has invited views and suggestions on the Concept Paper on Card Acceptance Infrastructure. Specific and actionable feedback would be highly valued.

**Mar 16, 2016 :** RBI to issue of 10 banknotes with inset letter 'C'

RBI will shortly issue 10 denomination banknotes in the Mahatma Gandhi Series-2005, with inset letter 'C' in both the number panels, bearing the signature of Dr. Raghuram G. Rajan, Governor, Reserve Bank of India. The year of printing '2016' appears on the reverse of the banknote.

The design of these banknotes to be issued now is similar in all respects to the 10 banknotes in Mahatma Gandhi Series-2005 issued earlier.

All the banknotes in the denomination of 10 issued by the Bank in the past will continue to be legal tender.

**Mar 16, 2016 :** RBI to issue of 20 banknotes with inset letter 'A' The Reserve Bank of India will shortly issue 20 denomination banknotes in the Mahatma Gandhi Series-2005, with inset letter 'A' in both the number panels, bearing the signature of Dr. Raghuram G. Rajan, Governor, Reserve Bank of India. The year of printing '2016 ' appears on the reverse of the banknotes.

The design of these banknotes to be issued now is similar in all respects to the 20 banknotes in Mahatma Gandhi Series- 2005 issued earlier.

All the banknotes in the denomination of 20 issued by the Bank in the past will continue to be legal tender.

**Mar 23, 2016 :** Designated Trade Repository under the Payment and Settlement Systems Act, 2007

The amendments to the Payment and Settlement Systems Act, 2007 (PSS Act) notified in May 2015 have brought the Trade Repository under the ambit of this Act. Accordingly, the Clearing Corporation of India Limited (CCIL) shall be the designated trade repository under Section 34 (2) of the PSS Act for the OTC interest rate and foreign exchange contracts as mandated by the RBI from time to time. The provisions of the PSS Act shall apply to the designated trade repository as they apply to, or in relation to, payment systems to the extent applicable.

Swabhimani Sahakari, Monthly, Posting Day 8th.
Posted at Bangalore PSO, Mysore Road, Bangalore 560026
Registered No. RNP/BGW/1744/2014-16. RNI No. KARBIL - 2004/18001. Pages 24

The trade repository being a Financial Market Infrastructure (FMI) shall be regulated and supervised as per the policy framework for "Regulation and Supervision of Financial Market Infrastructures regulated by RBI".

**Mar 29, 2016 :** RBI clarifies its Directions on MCLR System. RBI clarified some of the provisions of Reserve Bank of India (Interest Rate on Advances) Directions, 2016 relating to the Marginal Cost of Funds based Lending Rate (MCLR) system which comes into effect on April 01, 2016. The changes are :

**1. Fixed Rate Loans :** Fixed rate loans are exempted from being linked to MCLR as the benchmark for determining interest rate. On a review, it has been decided that fixed rate loans up to three years shall be priced with reference to MCLR. Fixed rate loans of tenor above three years will continue to be exempted from MCLR system.

**2. Computing Marginal Cost of Funds :** For computing Marginal Cost of Funds, balances of deposits and other borrowings outstanding as on the previous day of review shall be reckoned. On a review, it has been decided that banks will have the option to reckon the outstanding balances of deposits and other borrowings as on any day, not more than seven calendar days, prior to the date from which the MCLR becomes effective. The chosen time lag shall be maintained consistently for a period not less one year.

**3. MCLR of Various Maturities :** Banks are required to publish MCLR for various tenors. It is clarified that the tenor of the MCLR calculated as per the Annex shall correspond to the following:

i. The tenor of the funds in the single largest maturity bucket, provided it is more than 30 per-cent of the entire funds reckoned for determining the MCLR.

ii. The weighted average tenor of two or more maturity buckets that together account for more than 30 per-cent, if no single maturity bucket accounts for more than 30 per-cent of the funds. The maturity bucket shall be arrived at by calculating the cumulative weightage based on the descending order of the maturity time buckets.

**4. Effective Date for applying MCLR on Floating Rate Loan :** MCLR prevailing on the day a floating rate loan is sanctioned shall be applicable till the next reset date. On a review, it has been decided that MCLR prevailing on the date of first disbursement, whether partial or full, shall be applicable on the floating rate loan and future reset dates determined accordingly

The updated Reserve Bank of India (Interest Rate on Advances) Directions, 2016 is now available on the Reserve Bank's website www.rbi.org.in.

Background : The Reserve Bank of India had issued guidelines on Marginal Cost of Funds based Lending Rate (MCLR) vide circular DBR.No.Dir.BC.67/13.03.00/2015-16 dated December 17, 2015. The guidelines come into effect from April 1, 2016. II. Cancellation, Withdrawl, Penalties and Directions on Urban Co-operative Banks

**Mar 03, 2016 :** RBI imposes penalty 1.00 lakh (Rupees One lakh only) on The Muslim Co-operative Bank Ltd., Mysuru,

**Mar 11, 2016 :** RBI extends Directions issued to the Indian Mercantile Co-operative Bank Ltd., Lucknow, Uttara Pradesh till September 11, 2016

**Mar 21, 2016 :** RBI extends validity of the Directions issued to Pioneer Urban Co-operative Bank Ltd., Lucknow, Uttar Pradesh.

**Mar 22, 2016 :** RBI modifies Directions on the Bhopal Nagrik Sahakari Bank Ltd., Bhopal (M.P.).

**Mar 28, 2016 :** RBI extends Directions issued to Shree Ganesh Sahakari Bank Ltd., Nashik, Maharashtra till September 29, 2016

**Mar 31, 2016 :** RBI imposes penalty of 3.00 lakh (Rupees Three Lakh) on The Jambusar Peoples Co-operative Bank Ltd., Jambusar, Dist. Bharuch (Gujarat),

**Mar 31, 2016 :** RBI imposes penalty of 3.00 lakh (Rupees Three Lakh) on The Harij Nagrik Sahakari Bank Ltd., Harij, Dist. Patan (Gujarat), Source: www.rbi.org.in

ಬೆಂಗಳೂರು ವಿಭಾಗೀಯ ಕಛೇರಿ : ನಂ. 141, 1ನೇ ಮೈನ್,1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1-ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು.560 010. ದೂ: 080 – 23525546
ಮೈಸೂರು ವಿಭಾಗೀಯ ಕಛೇರಿ : ನಂ. 200, ಶಂಕರ ಮಠ ಮುಖ್ಯರಸ್ತೆ, ಕಿಲ್ಲೇ ಮೊಹಲ್ಲಾ, ಮೈಸೂರು. ದೂ : 0821 – 2332299
ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂ : 0831 – 2401551
ಕಲಬುರಗಿ ವಿಭಾಗೀಯ ಕಛೇರಿಯ : ನಂ. 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ ಗಾರ್ಡನ್ ರಸ್ತೆ, ಕಲಬುರಗಿ – 585102. ದೂ. 08472 – 270222.

Edited, Printed and Published by Sharangouda G. Patil – Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010